SEVA BHARATHI
सेवा ही परमो धर्मः

ಸಂಪುಟ : 06
ಸಂಚಿಕೆ : 08

# ಸೇವಾಪಥ

ಸೇವಾಭಾರತಿ(ರಿ.), ಬೆಳ್ತಂಗಡಿ ತಾ॥ ಇದರ
(ರಾಜ್ಯ ಪ್ರಶಸ್ತಿ ಪುರಸ್ಕೃತ ಸೇವಾ ಸಂಸ್ಥೆ-2022)
ಮಾಸಿಕ e–ನ್ಯೂಸ್ ಲೆಟರ್ – ಆಗಸ್ಟ್ 2025

ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ–॥, ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ. – 574 216




## ತರೀಕೆರೆಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ 31ನೇ ವಸತಿಯುತ ಉಚಿತ ಆರೋಗ್ಯ ತಪಾಸಣಾ, ಮಾಹಿತಿ ಹಾಗೂ ಜಾಗೃತಿ ಶಿಬಿರ

## ಮುಂಬೈಯ The Mani and Minoo Desai Charitable Trust ನಿಂದ ನೂತನ ಕಟ್ಟಡಕ್ಕೆ ರೂ. 15,00,000/- ದೇಣಿಗೆ

## ಸೇವಾಭಾರತಿಗೆ FCRA ನೋಂದಣಿ ಪ್ರಮಾಣ ಪತ್ರ

## ಕೆ. ವಿನಾಯಕ ರಾವ್ ರವರಿಗೆ IOA ಸುವರ್ಣ ಸಾಧಕ ಪ್ರಶಸ್ತಿ

## "I choose to be unstoppable" ಆತ್ಮಸ್ಥೈರ್ಯದಿಂದ ದಿವ್ಯಾಂಗತೆಯನ್ನು ಮೆಟ್ಟಿನಿಂತ ನಿರಂಜನ್ ನೆರ್ಲಿಗೆ ವಿ. ರವರ ಯಶೋಗಾಥೆ

## ನಮ್ಮಿಂದಿಷ್ಟು

ಎಲ್ಲರಿಗೂ ನಮಸ್ಕಾರಗಳು,

ನಮ್ಮ ಸಂಸ್ಥೆಗೆ Ministry of Home Affairs ದಿಂದ FCRA ದೊರೆತಿದೆ. ಸಂಸ್ಥೆಗಳು ಒಂದು ಹಂತದಲ್ಲಿ ಸರಿಯಾದ Compliance (ಅನುಸರಣೆ)ಗಳನ್ನು ಹೊಂದಿದ್ದಲ್ಲಿ ಯಾವ ಇಲಾಖೆಗಳ ಮರ್ಜಿಗೂ ಬೀಳಬೇಕಾಗಿಲ್ಲ. FCRA ನೋಂದಣಿ (Foreign Contribution Regulation Act) ಯಿಂದಾಗಿ ಇನ್ನು ಮುಂದೆ ವಿದೇಶಿ ನಿಧಿಯನ್ನು ಸ್ವೀಕರಿಸಬಹುದು ಆದ ಕಾರಣ FCRA ಹೊಂದುವುದು ಸಂಸ್ಥೆಗಳಿಗೆ ಒಂದು Credibility. ನಾವು ಈ ಬಗ್ಗೆ ಸಂತೋಷಿಗಳು.

ನಮ್ಮ ತಾಲೂಕಿನ 25 ಪ್ರಾಥಮಿಕ ಕೃಷಿ ಪತ್ತಿನ ಸೇವಾ ಸಹಕಾರಿ ಸಂಘಗಳಿಗೆ ಪುನಶ್ಚೇತನ ಕೇಂದ್ರದ ಕಟ್ಟಡ ನಿರ್ಮಾಣ ಕಾರ್ಯಕ್ಕಾಗಿ ಧನ ಸಹಾಯ ನೀಡುವಂತೆ ವಿನಂತಿಸಿದ ಪರಿಣಾಮ ಸೊಸೈಟಿಗಳು ಧನಸಹಾಯ ನೀಡುತ್ತಿರುವುದು ಪ್ರಾರಂಭವಾಗಿದೆ. ಇತ್ತ ಕಡೆ ಕಟ್ಟಡ ಕಾರ್ಯಗಳು ಭರದಿಂದ ಸಾಗುತ್ತಿದೆ.

ತರೀಕೆರೆಯಲ್ಲಿ 31ನೇ ಉಚಿತ ಆರೋಗ್ಯ ತಪಾಸಣಾ, ಮಾಹಿತಿ ಮತ್ತು ತರಬೇತಿ ಶಿಬಿರವು ತಾಲೂಕು ಆಸ್ಪತ್ರೆಯಲ್ಲಿ ನಡೆಯಿತು. ಚಿಕ್ಕಮಗಳೂರು ಜಿಲ್ಲೆಯ 8 ಮಂದಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರು ಭಾಗವಹಿಸಿ ಶಿಬಿರದ ಸದುಪಯೋಗವನ್ನು ಪಡೆದುಕೊಂಡರು. ಆಸ್ಪತ್ರೆಯ ಆಡಳಿತ ವರ್ಗ, ವೈದ್ಯರು ಹಾಗೂ ದಾದಿಯರ ಸಹಕಾರದೊಂದಿಗೆ, ರೋಟರಿ ಕ್ಲಬ್ ನ ಸಹಭಾಗಿತ್ವದಲ್ಲಿ ಈ ಎರಡು ದಿನಗಳ ಶಿಬಿರ ಜರುಗಿ ಸಮಾಪನಗೊಂಡಿತು.

ನಿಡ್ಲೆಯಲ್ಲಿ 34ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರವು ಪ್ರಾರಂಭಗೊಂಡಿದೆ. 32 ಶಿಬಿರಾರ್ಥಿಗಳಿಂದ ಪ್ರಾರಂಭಗೊಂಡಿರುವುದು. ಸ್ಥಳೀಯ ಕೃಷಿ ಪತ್ತಿನ ಸಹಕಾರಿ ಸಂಘದ ಸಹಕಾರವನ್ನು ಪಡೆದುಕೊಂಡಿರುತ್ತೇವೆ.

Indian Orthopedic Association ನವರು ಮಂಗಳೂರಿನ ಅತ್ತಾವರ KMC ಆಸ್ಪತ್ರೆಯಲ್ಲಿ ಹಮ್ಮಿಕೊಂಡ ಇಂಡಿಯನ್ ಆರ್ಥೋಪೆಡಿಕ್ ಅಸೋಸಿಯೇಷನ್ ಮೂಳೆ ಮತ್ತು ಕೀಲು ಸಾಪ್ತಾಹಿಕ–2025 ಕಾರ್ಯಕ್ರಮದಲ್ಲಿ ಸ್ವತಃ ನನ್ನನ್ನು ಗೌರವಿಸಿರುತ್ತಾರೆ. ಇದು ಈ ದಿವ್ಯಾಂಗತೆಗೆ ಸಂದ ಗೌರವ ಎಂದು ಪರಿಗಣಿಸಬಹುದು.

ಒಟ್ಟಿನಲ್ಲಿ ಸೇವಾಕಾರ್ಯಗಳು ನಿರಂತರತೆಯಿದೆ.



ಸೇವಾ ಹೀ ಪರಮೋ ಧರ್ಮಃ

ತಾಯಿ ಭಾರತಿಯ ಸ್ಮರಣೆಗಳೊಂದಿಗೆ,

ಇತಿ ತಮ್ಮವ,

**ಕೆ. ವಿನಾಯಕ ರಾವ್**


### ನಮ್ಮ ವಿಳಾಸ

**ಪ್ರಧಾನ ಕಚೇರಿ :**

ಸೇವಾನಿಕೇತನ, ಕನ್ಯಾಡಿ–II
ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು – 574 216
ಮೊ.: 99454 91241

**ಸೇವಾ ಕೇಂದ್ರ :**

ಸೇವಾಧಾಮ
(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)
ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ
ಕೊಕ್ಕಡ ಗ್ರಾಮ – 574 198
ಮೊ.: 94482 54888

### ನಮ್ಮ ತಂಡ

| | |
|---|---|
| ಶ್ರೀಮತಿ ಸ್ವರ್ಣಗೌರಿ | – ಅಧ್ಯಕ್ಷರು |
| ಶ್ರೀ ಕೆ. ಯು. ಗಿರೀಶ್ ರಾವ್ | – ಉಪಾಧ್ಯಕ್ಷರು |
| ಶ್ರೀ ಕೆ. ಬಾಲಕೃಷ್ಣ | – ಕಾರ್ಯದರ್ಶಿ |
| ಶ್ರೀ ಕೆ. ವಿನಾಯಕ ರಾವ್ | – ಖಜಾಂಚಿ |
| ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ | – ಟ್ರಸ್ಟಿ |
| ಶ್ರೀ ಜಯರಾಜ್ ಸಾಲ್ಯಾನ್ | – ಟ್ರಸ್ಟಿ |
| ಶ್ರೀ ಪೃಥ್ವೀಶ್ | – ಟ್ರಸ್ಟಿ |

### ಸಲಹಾ ಮಂಡಳಿ

1. ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್
2. ಡಾ. ಎ. ಜಯಕುಮಾರ್ ಶೆಟ್ಟಿ
3. ಶ್ರೀಮತಿ ಮನೋರಮ ಭಟ್
4. ಶ್ರೀ ವಿಜಯ ಕೊಡವೂರು
5. ಶ್ರೀ ಆದಿತ್ಯ ಕಲ್ಲೂರಾಯ
6. ಶ್ರೀ ಕಿರಣ್ ರಾಜ್ ಕೆ.

### ಸಂಚಾಲಕರು

ಶ್ರೀ ಕೆ. ಪುರಂದರ ರಾವ್

# ತರೀಕೆರೆಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ 31ನೇ ವಸತಿಯುತ ಉಚಿತ ಆರೋಗ್ಯ ತಪಾಸಣಾ, ಮಾಹಿತಿ ಹಾಗೂ ಜಾಗೃತಿ ಶಿಬಿರ










**ತರೀಕೆರೆ (ಆ.12):–** ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಚಿಕ್ಕಮಗಳೂರು, ತಾಲ್ಲೂಕು ಆರೋಗ್ಯಾಧಿಕಾರಿಗಳ ಕಚೇರಿ, ತರೀಕೆರೆ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ರೋಟರಿ ಕ್ಲಬ್ ತರೀಕೆರೆ ಮತ್ತು ಸೇವಾಭಾರತಿ – ಸೇವಾಧಾಮ, ಚಿಕ್ಕಮಗಳೂರು ಇವುಗಳ ಸಂಯುಕ್ತಾಶ್ರಯದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ 31ನೇ ವಸತಿಯುತ ಉಚಿತ ಆರೋಗ್ಯ ತಪಾಸಣಾ, ಮಾಹಿತಿ ಹಾಗೂ ಜಾಗೃತಿ ಶಿಬಿರದ ಉದ್ಘಾಟನಾ ಸಮಾರಂಭವು ಆಗಸ್ಟ್ 12 ರಂದು ತರೀಕೆರೆ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ನಡೆಸಲಾಯಿತು.

ಕಾರ್ಯಕ್ರಮವನ್ನು ತರೀಕೆರೆ ತಾಲ್ಲೂಕು ಆರೋಗ್ಯಾಧಿಕಾರಿಗಳಾದ ಡಾ। ಚಂದ್ರಶೇಖರ್ ಬಿ.ಜಿ ಉದ್ಘಾಟಿಸಿ ಸೇವಾಧಾಮ ಮಾಡುವ ಕಾರ್ಯಚಟುವಟಿಕೆಗಳನ್ನು ಶ್ಲಾಘಿಸಿ, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರು ಸಮಾಜದಲ್ಲಿ ಹಿಂದುಳಿಯದೆ ಪ್ರತಿಯೊಂದು ವಿಷಯದಲ್ಲೂ ಮುಂದೆ ಬರಬೇಕು ಎನ್ನುವ ದೃಷ್ಟಿಯಿಂದ ಇಂತಹ ಶಿಬಿರವನ್ನು ಆಯೋಜಿಸುವಾಗ ನಮ್ಮಿಂದ ಸಂಪೂರ್ಣವಾಗಿ ಸಹಕಾರವನ್ನು ನೀಡುತ್ತೇವೆ ಹಾಗೇ ಸೇವಾಭಾರತಿ ಸಂಸ್ಥೆಯು ಇನ್ನು ಹೆಚ್ಚಿನ ಸೇವಾಕಾರ್ಯಗಳನ್ನು ಮಾಡುವಂತಾಗಿ, ಯಶಸ್ಸು ನಿಮ್ಮದಾಗಲಿ ಎಂದು ಉದ್ಘಾಟಕರ ನುಡಿಗಳನ್ನಾಡಿದರು.

ಶಿಬಿರದ ಸಮಯದಲ್ಲಿ ದಿವ್ಯಾಂಗರಿಗೆ USG ಸ್ಕ್ಯಾನಿಂಗ್, ಬ್ಲಡ್ ಟೆಸ್ಟ್, ವೈಟಲ್ ತಪಾಸಣೆ, ಜನರಲ್ ಫಿಸಿಕಲ್ ಕನ್ಸಲ್ಟೇಷನ್, ಆರ್ಥೋ ಡಾಕ್ಟರ್ ಕನ್ಸಲ್ಟೇಷನ್, ಹಲ್ಲಿನ ತಪಾಸಣೆ ಹಾಗೂ ಕಣ್ಣಿನ ತಪಾಸಣೆ ಮತ್ತು 4 ಮಂದಿ ದಿವ್ಯಾಂಗರಿಗೆ ಒತ್ತಡಗಾಯ ನಿರ್ವಹಣೆಯನ್ನು ಮಾಡಲಾಯಿತು. ಈ ಸಂದರ್ಭದಲ್ಲಿ ತರೀಕೆರೆ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿಗಳಾದ ಡಾ. ಚನ್ನಬಸಪ್ಪ ಎಂ. ಜೆ, ಸಹಾಯಕ ಗವರ್ನರ್, ವಲಯ–7, ಜಿಲ್ಲೆ–3182 ರೋ। ಪ್ರವೀಣ್ ನಹರ್ ಟಿ ಎಂ, ತರೀಕೆರೆ ರೋಟರಿ ಕ್ಲಬ್ ಅಧ್ಯಕ್ಷರಾದ ರೋ। ರವಿ ಕುಮಾರ್ ಬಿ. ಪಿ, ತರೀಕೆರೆ ರೋಟರಿ ಕ್ಲಬ್ ಕಾರ್ಯದರ್ಶಿ ರೋ। ಪ್ರವೀಣ್ ಪಿ, ಜಿಲ್ಲಾ ಸಂಯೋಜಕರು ಶ್ರೀ ರಾಬರ್ಟ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸೇವಾಭಾರತಿ ಫಂಡ್ ರೈಸಿಂಗ್ ಮತ್ತು ಮಾರ್ಕೆಟಿಂಗ್ ಮ್ಯಾನೇಜರ್ ಶ್ರೀ ಆಶ್ರಿತ್ ಸಿ.ಪಿ ಸ್ವಾಗತಿಸಿ, ಕಾರ್ಯಕ್ರಮ ಸಂಯೋಜಕರಾದ ಶ್ರೀ ನಾಗಾರ್ಜುನ್ ಡಿ ಎ ಕಾರ್ಯಕ್ರಮವನ್ನು ನಿರೂಪಿಸಿ, ದಕ್ಷಿಣ ಕನ್ನಡ ಮತ್ತು ಕೊಡಗು ಕ್ಷೇತ್ರ ಸಂಯೋಜಕರಾದ ಕುಸುಮಾಧರ್ ಧನ್ಯವಾದ ವಿತ್ತರು.

ಸಮಾರೋಪ ಸಮಾರಂಭದಲ್ಲಿ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ.ವಿನಾಯಕ ರಾವ್ ಮತ್ತು ಸೇವಾಭಾರತಿ ಹಿರಿಯ ಪ್ರಬಂಧಕರಾದ ಶ್ರೀ ಚರಣ್ ಕುಮಾರ್ ಎಂ. ಉಪಸ್ಥಿತರಿದ್ದರು.

ಒಟ್ಟು 8 ಮಂದಿ ಶಿಬಿರಾರ್ಥಿಗಳು ಶಿಬಿರದಲ್ಲಿ ಪಾಲ್ಗೊಂಡಿದ್ದರು.

*Abled does not mean enabled. Disabled does not mean less abled*

# ಸಂಪನ್ನಗೊಂಡ 33ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರ



**ತುಂಬೆತಡ್ಕ (ಆ.02):** ಸೇವಾಭಾರತಿ (ರಿ.), ಕನ್ಯಾಡಿ ಇದರ ನೇತೃತ್ವದಲ್ಲಿ, ಸಬಲಿನಿ ಯೋಜನೆಯಡಿ ಗ್ರಾಮ ಪಂಚಾಯತ್, ಅರಸಿನಮಕ್ಕಿ, ಹತ್ಯಡ್ಕ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ (ನಿ.), ಅರಸಿನಮಕ್ಕಿ ಇದರ ಸಹಭಾಗಿತ್ವದಲ್ಲಿ ಮಹಿಳೆಯರಿಗಾಗಿ 33ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರದ ಸಮಾರೋಪ ಸಮಾರಂಭವು ಆಗಸ್ಟ್ 02 ರಂದು ರಾಣೆಯರ್ ಸಭಾಭವನ ತುಂಬೆತಡ್ಕದಲ್ಲಿ ನಡೆಯಿತು.

ಅರಸಿನಮಕ್ಕಿ ಗ್ರಾಮ ಪಂಚಾಯತ್ ಉಪಾಧ್ಯಕ್ಷರಾದ ಶ್ರೀ ಸುಧೀರ್ ಎಂ.ಎಸ್ ಟೈಲರಿಂಗ್ ಕಲಿಯುವುದರಿಂದ ಬೇರೆ ಬೇರೆ ರೀತಿಯ ಸ್ವ – ಉದ್ಯೋಗದ ಅವಕಾಶವಿರುತ್ತದೆ. ಕಲಿತಂತ ವಿದ್ಯೆಯನ್ನು ಅರ್ಧಕ್ಕೆ ಕೈ ಬಿಡದೆ ಮುಂದುವರಿಸಿಕೊಂಡು ಹೋಗಿ ಎಂದು ಶುಭಹಾರೈಸಿದರು.

ಕಾರ್ಯಕ್ರಮದಲ್ಲಿ ಸೇವಾಭಾರತಿ ಸಂಸ್ಥೆಯ ಖಜಾಂಚಿ ಮತ್ತು ಸೇವಾಧಾಮ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ರವರು ಮಾತನಾಡಿ ಯಾವುದೇ ವಿದ್ಯೆಯಾದರು ನಮಗೆ ಅದು ಎಂದಿಗೂ ಶಾಶ್ವತ. ಮಹಿಳೆಯರು ಯಾವ ವಿಷಯದಲ್ಲೂ ಹಿಂದುಳಿಯದೆ ಸ್ವಾವಲಂಬಿ ಜೀವನವನ್ನು ಮಾಡುತ್ತ ಮುನ್ನಡೆಯುವುದು ಅತ್ಯಗತ್ಯವೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಟೈಲರಿಂಗ್ ತರಬೇತುದಾರರಾದ ಶ್ರೀಮತಿ ಪ್ರತಿಮಾ ಎಲ್ಲರಿಗೂ ಶುಭಹಾರೈಸಿ ಸಂತಸ ವ್ಯಕ್ತಪಡಿಸಿದರು. ನಮ್ಮ ಸಂಸ್ಥೆಯ ಪರವಾಗಿ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು ಮತ್ತು ಅರಸಿನಮಕ್ಕಿ, ಹತ್ಯಡ್ಕ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದವರು ಶ್ರೀಮತಿ ಪ್ರತಿಮಾ ರವರಿಗೆ ಗೌರವಧನವನ್ನು ನೀಡಿ ಸಹಕರಿಸಿದ್ದಾರೆ. ನಂತರ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರವನ್ನು ವಿತರಿಸಲಾಯಿತು.

ಅರಸಿನಮಕ್ಕಿ, ಶಿವಾನಿ ಸಂಜೀವಿನಿ ಮಹಿಳಾ ಒಕ್ಕೂಟದ ಮುಖ್ಯ ಪುಸ್ತಕ ಬರಹಗಾರರಾದ ಶ್ರೀಮತಿ ನೀತಾ ರಾಧೇಶ್ ಆಚಾರ್ಯರವರು ಸೇವಾಭಾರತಿ ಸಂಸ್ಥೆಯ ಜೊತೆ ಕೈ ಜೋಡಿಸಿ ಅರಸಿನಮಕ್ಕಿ, ನೆಲ್ಯಡ್ಕ ಹಾಗೂ ತುಂಬೆತಡ್ಕದಲ್ಲಿ ಸತತ 3 ಶಿಬಿರದ ಸಂಪೂರ್ಣ ಜವಾಬ್ದಾರಿಯನ್ನು ತೆಗೆದುಕೊಂಡು 91 ಮಂದಿಗೆ ಸ್ವಾವಲಂಬಿ ಜೀವನವನ್ನು ನಡೆಸಲು ಕಾರಣಿಕರ್ತರಾಗಿದ್ದಾರೆ ಇವರಿಗೆ ಸಂಸ್ಥೆಯ ಪರವಾಗಿ ಸನ್ಮಾನಿಸಿ ಗೌರವಿಸಲಾಯಿತು. ಅರಸಿನಮಕ್ಕಿ, ಹತ್ಯಡ್ಕ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ (ನಿ.), ನಿರ್ದೇಶಕರಾದ ಶ್ರೀಮತಿ ಬೇಬಿ, ಬೆಳ್ತಂಗಡಿ LIC of INDIA, Developement Officer ಶ್ರೀ ಉದಯಶಂಕರ್ ಕೆ, ಅರಸಿನಮಕ್ಕಿ ಗ್ರಾಮ ಪಂಚಾಯತ್ ಸದಸ್ಯರಾದ ಶ್ರೀ ಪ್ರೇಮಚಂದ್ರ, ನಿವೃತ್ತ ಯೋಧರು ಶ್ರೀ ಕೆ. ಮಹಾಬಲ ತುಂಬೆತ್ತಡ್ಕ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಒಟ್ಟು 31 ಮಂದಿ ಶಿಬಿರಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಶ್ರೀಮತಿ ವೇದಾವತಿ ಸ್ವಾಗತಿಸಿ, ಡಾಕ್ಯುಮೆಂಟೇಶನ್, ಮಾನಿಟರಿಂಗ್ ಮತ್ತು ಇವಲ್ಯೂವೇಟಿಂಗ್ ಕಾರ್ಡಿನೇಟರ್ ಸುಮ ಕಾರ್ಯಕ್ರಮ ನಿರೂಪಿಸಿ, ಶ್ರೀಮತಿ ಆಶಾ ಧನ್ಯವಾದವಿತ್ತರು.

# ಕೆ. ವಿನಾಯಕ ರಾವ್‌ರವರಿಗೆ IOA ಸುವರ್ಣ ಸಾಧಕ ಪ್ರಶಸ್ತಿ




ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಸೇವಾಧಾಮ ಪುನಶ್ಚೇತನ ಕೇಂದ್ರದ ಮೂಲಕ ಪುನಶ್ಚೇತನವನ್ನು ನೀಡುತ್ತಾ ಹಾಗೆ ಆರೋಗ್ಯ ತಪಾಸಣಾ, ರಕ್ತದಾನ ಶಿಬಿರ, ಮಹಿಳಾ ಸಬಲೀಕರಣ ಹೀಗೆ ಹಲವಾರು ಸೇವಾ ಚಟುವಟಿಕೆಗಳನ್ನು ನಡೆಸುತ್ತಿರುವ ಕನ್ಯಾಡಿ ಸೇವಾಭಾರತಿ ಖಜಾಂಚಿ ಮತ್ತು ಸೇವಾಧಾಮ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ರವರನ್ನು ಮಂಗಳೂರು ಕಸ್ತೂರ್ಬಾ ಮೆಡಿಕಲ್ ಕಾಲೇಜು ಆಯೋಜಿಸಿದ ಇಂಡಿಯನ್ ಆರ್ಥೋಪೆಡಿಕ್ ಅಸೋಸಿಯೇಷನ್ ಮೂಳೆ ಮತ್ತು ಕೀಲು ಸಾಪ್ತಾಹಿಕ – 2025 ಕಾರ್ಯಕ್ರಮದಲ್ಲಿ IOA ಸುವರ್ಣ ಸಾಧಕ ಪ್ರಶಸ್ತಿಯನ್ನು ನೀಡಿ ಸನ್ಮಾನಿಸಿದ್ದಾರೆ. ಈ ಸಂದರ್ಭದಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಡಾ.ಚೇತನ್ ಶೆಟ್ಟಿ, ಪ್ರೊಫೆಸರ್ ಮತ್ತು HOD, ಡಿಪಾರ್ಟ್ಮೆಂಟ್ ಆಫ್ ಆರ್ಥೋಪೆಡಿಕ್ ಡಾ. ಆತ್ಮಾನಂದ ಹೆಗ್ಡೆ, ಅಸೋಸಿಯೇಟ್ ಪ್ರೊಫೆಸರ್ ಮತ್ತು ಸ್ಪೈನ್ ಸರ್ಜನ್ ಡಾ. ಈಶ್ವರಕೀರ್ತಿ ಸಿ, ಸ್ಪೈನ್ ಸರ್ಜನ್ ಡಾ. ವೈಶಾಕ್ ಭಟ್, ಅಸಿಸ್ಟೆಂಟ್ ಪ್ರೊಫೆಸರ್ ಡಾ. ಕೀರ್ತನ್ ರಂಗ ನಾಯಕ್ ರವರು ಉಪಸ್ಥಿತರಿದ್ದರು.

## ಮಹನೀಯ ದಾನಿಗಳು

ಡಾ ಕೆ ಗೋಪಾಲಕೃಷ್ಣ, ಉಜಿರೆ
ಡಾ ಟಿ ಕೃಷ್ಣ ಮೂರ್ತಿ, ಉಜಿರೆ
ಶ್ರೀಮತಿ ಶಾಂತಿ ಬಾಲಕೃಷ್ಣ, ಬಂಟ್ವಾಳ
33ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರ, ತುಂಬೆತ್ತಡ್ಕ
ಶ್ರೀ ವೆಂಕಟಗಿರಿ ಪಿ ಎಂ, ಬೆಂಗಳೂರು
ಶ್ರೀ ಸೂರಜ್ ಎಸ್ ಕುಲಾಲ್, ಮಂಗಳೂರು
ಶ್ರೀ ಸದಾಶಿವ ಕೆ, ಅರಸಿಕೆರೆ
ಶ್ರೀಮತಿ ತೇಜಾವತಿ, ಕನ್ಯಾಡಿ
ಶ್ರೀ ವಿಜಯ ರಾಘವೇಂದ್ರ, ಉಜಿರೆ
ಶ್ರೀ ಕಿರಣ್ ಕುಮಾರ್, ಕನ್ಯಾಡಿ
ಶ್ರೀ ಶಶಿಧರ್ ಎಸ್ ಖಾಡಿಲ್ಕರ್, ಮುಂಡಾಜೆ
ಶ್ರೀಮತಿ ಶ್ವೇತಾ, ಕಲ್ಮಂಜ
ಶ್ರೀ ಗೋವಿಂದ ಸ್ವಾಮಿ, ಬೆಂಗಳೂರು
ಶ್ರೀ ಎಚ್ ಭೂಷಣ್, ಮಂಗಳೂರು
ಶ್ರೀಮತಿ ಲಕ್ಷ್ಮೀದೇವಿ ಉಡುಪ, ಉಡುಪಿ

ಡಾ ಎ ಜಯಕುಮಾರ್ ಶೆಟ್ಟಿ, ಅರ್ಕುಳ
ಶ್ರೀ ಕಾರ್ತಿಕ್ ಕೆ, ಕೊಕ್ಕಡ
ಶ್ರೀ ಪಣಂಬೂರು ಬಾಲಕೃಷ್ಣ ರಾವ್, ಬೆಂಗಳೂರು

ಶ್ರೀಮತಿ ಸ್ವರ್ಣಗೌರಿ, ಜೋಡುಸ್ಥಾನ
ಶ್ರೀ ಗುರುರಾಜ್, ಕಲ್ಮಂಜ
ಡಾ ಎ ಸಾಜನ್ ಶೆಟ್ಟಿ, ಅರ್ಕುಳ
ಶ್ರೀ ಸುಧೀರ್ ಸಾಲಿಯಾನ್, ಗರ್ಡಾಡಿ
ಶ್ರೀ ಯುವರಾಜ್, ಉಜಿರೆ
ಶ್ರೀ ಶಿವರಾಮ, ಕಡಬ
ಶ್ರೀ ವಿನೋದ್ ಖಾಡಿಲ್ಕರ್, ಬೆಂಗಳೂರು
ಶ್ರೀ ಶ್ರೀಧರ್, ತೀರ್ಥಹಳ್ಳಿ
ಶ್ರೀ ವಿ. ಉದಯ, ಶಿಶಿಲ
ಶ್ರೀ ಮೋಹನ್ ಎಸ್, ನಿಡ್ಲೆ
ಶ್ರೀ ಸತೀಶ್ ಪೂಜಾರಿ, ಪುತ್ತೂರು
ಶ್ರೀ ಪವನ್ ಜೆ ಕುಲಾಲ್, ಪೆರ್ಣಂಕಿಲ
ಶ್ರೀ ಟಿ ಎಸ್ ಜಯರಾಮ್, ತರೀಕೆರೆ
ಶ್ರೀ ಶ್ರೀನಾಥ್ ವೈ ಭಾನುವಳ್ಳಿ, ರಾಣೆಬೆನ್ನೂರ್
ಶ್ರೀ ಪ್ರಕಾಶ್ ಕರಿಯಜ್ಜನವರ್, ರಾಣೆಬೆನ್ನೂರ್

## ಸೇವಾನಿಧಿ ದಾನಿಗಳು

ಶ್ರೀ ರಾಜೇಶ್ ಫಡ್ಕೆ, ಬೆಂಗಳೂರು
ಶ್ರೀಮತಿ ಸ್ವರ್ಣಗೌರಿ, ಜೋಡುಸ್ಥಾನ
ಶ್ರೀ ಬಿ. ಕೃಷ್ಣಪ್ಪ ಗುಡಿಗಾರ್, ಕಲ್ಮಂಜ
ಶ್ರೀ ಕೆ ವಿನಾಯಕ ರಾವ್, ಕನ್ಯಾಡಿ
ಶ್ರೀ ಕೆ ಪುರಂದರ ರಾವ್, ನಾರ್ಯ
ಶ್ರೀಮತಿ ಜಯಂತಿ ಪುರಂದರ, ನಾರ್ಯ
ಶ್ರೀ ರಾಜಾರಾಮ್ ಕಾರಂತ್, ಬೆಂಗಳೂರು
ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ, ಉಡುಪಿ
ಶ್ರೀ ಸುನಿಲ್ ಪಿ ಎನ್, ಕನ್ಯಾಡಿ
ಶ್ರೀಮತಿ ವಸಂತಿ ಗೌಡ, ಬೊಲ್ಮ
ಶ್ರೀ ಕಾರ್ತಿಕ್ ಕೆ, ನೇತ್ರಾವತಿ
ಶ್ರೀ ಕೆ ರಾಘವೇಂದ್ರ ಶಾಸ್ತ್ರಿ, ಧರ್ಮಸ್ಥಳ
ಶ್ರೀ ಪುರುಷೋತ್ತಮ್ ಡಿ ಎ, ಧರ್ಮಸ್ಥಳ
ಡಾ ರಾಮಕೃಷ್ಣ ಭಟ್ ಜಿ ಎನ್, ಕನ್ಯಾಡಿ

ಮಾಸ್ಟರ್ ಅದ್ವೈತ ಪೈ, ಕನ್ಯಾಡಿ
ಶ್ರೀ ಕೆ ರಮೇಶ್ ಪೂಜಾರಿ, ಕನ್ಯಾಡಿ
ಶ್ರೀ ಶೆಲ್ಡನ್ ಮೋನಿಸ್, ಕುವೆಟ್ಟು
ಶ್ರೀ ಸುನಿಲ್ ಕುಮಾರ್ ಜೈನ್, ಕನ್ಯಾಡಿ
ಶ್ರೀ ಅಖಿಲೇಶ್ ಕೆ ಎಲ್, ಪುತ್ತೂರು
ಶ್ರೀ ರಜತ್ ಕುಮಾರ್ ಜೆ ಡಿ, ವೇಣೂರು
ಹೋಟೆಲ್ ಬಾಂಬೆ ಡೈನ್, ಉಜಿರೆ
ಶ್ರೀ ಅಣ್ಣು ದೇವಾಡಿಗ, ನೇತ್ರಾವತಿ
ಶ್ರೀಮತಿ ಸವಿತಾ ಎಂ ರಾವ್, ಕನ್ಯಾಡಿ
ಶ್ರೀ ಶಿವಕುಮಾರ್, ಉಜಿರೆ
ಶ್ರೀ ಮಧುಸೂಧನ್, ಉಜಿರೆ
ಬೇಬಿ ಶ್ರೀ ಬಿಲ್ವಾನಿ, ಉಜಿರೆ
ಶ್ರೀ ಜಿ ಪುಟ್ಟಸ್ವಾಮಿ, ಉಜಿರೆ
ಶ್ರೀ ಬಿ ಪುರಂದರ, ನಾರ್ಯ

## ದೇಣಿಗೆ ನೀಡಿದ ಸಂಘ ಸಂಸ್ಥೆಗಳು

The Mani and Minoo Desai Charitable Trust, Mumbai
ಶ್ರೀ ಮಾರಿಕಾಂಬ ದೇವಸ್ಥಾನ, ಶಿರಸಿ
ಶ್ರೀ ಸಿದ್ಧಿ ವಿನಾಯಕ ದೇವಸ್ಥಾನ, ಹಟ್ಟಿಯಂಗಡಿ
ಹಿಂದೂ ಧಾರ್ಮಿಕ ಸೇವಾ ಸಮಿತಿ ಮತ್ತು ಸಾರ್ವಜನಿಕ ಶ್ರೀ ಗಣೇಶೋತ್ಸವ ಸಮಿತಿ, ಕನ್ಯಾಡಿ
ಇನ್ನರ್ ವೀಲ್ ಕ್ಲಬ್, ಪುತ್ತೂರು
ಜಿ ಆರ್ ಕನ್ಸಲ್ಟಿಂಗ್, ಬೆಂಗಳೂರು
ಶ್ರೀ ಕೃಷ್ಣ ಜನ್ಮಾಷ್ಟಮಿ ಸಮಿತಿ, ಕನ್ಯಾಡಿ
ಕೆಮ್ ಟ್ರೆಂಡ್ ಕೆಮಿಕಲ್ಸ್ ಕಂಪೆನಿ ಪ್ರೈವೇಟ್ ಲಿಮಿಟೆಡ್, ಬೆಂಗಳೂರು
ಫೀಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಬೆಂಗಳೂರು

ರೋಟರಿ ಕ್ಲಬ್, ತರೀಕೆರೆ
ಕೊಯ್ಯೂರ್ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ (ನಿ.), ಕೊಯ್ಯೂರ್
ಎಕ್ಸ್ ಸರ್ವಿಸ್ ಮೆನ್ಸ್ ಅಸೋಸಿಯೇಷನ್ ಬೆಳ್ತಂಗಡಿ(ರಿ.), ಬೆಳ್ತಂಗಡಿ
ಪಡಂಗಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ (ನಿ.), ಪಡಂಗಡಿ
ಕಳಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ (ನಿ.), ಗೇರುಕಟ್ಟೆ
ಬೆಳ್ತಂಗಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ (ನಿ.), ಬೆಳ್ತಂಗಡಿ
ಶ್ರೀ ಶಿರಡಿ ಸಾಯಿ ಭಿಕ್ಷಾ ಕೇಂದ್ರ, ಮಂಗಳೂರು
Cardolite Specialty Chemicals India LLP, Mangalore
ಸಾರ್ವಜನಿಕ ಶ್ರೀ ಗಣೇಶೋತ್ಸವ ಸಮಿತಿ ಕಜಕೆ ಮತ್ತು ವಿದ್ಯಾ ಗಣಪತಿ ಸೇವಾ ಸಮಿತಿ ಮಲವಂತಿಗೆ

## ಆಗಸ್ಟ್ ತಿಂಗಳ ಸೇವಾ ಕಾರ್ಯಗಳು

1. ಸೆಲ್ಫ್ ಕೇರ್ ಕಿಟ್ ಮತ್ತು ಮೆಡಿಕಲ್ ಕಿಟ್ – 33
2. ಹೊಸ ಗುರುತಿಸುವಿಕೆ – 10
3. ನಿಯೋ ಮೋಶನ್ ವಿಥ್ ಕಾರ್ಟ್ ವಿತರಣೆ – 1
4. ಗಾಳಿಯ ಹಾಸಿಗೆ ವಿತರಣೆ – 1

## ವಸ್ತು ರೂಪದಲ್ಲಿ ದೇಣಿಗೆ

ಉಜಿರೆ ಹವ್ಯಕ ವಲಯ, ಉಜಿರೆ
ಶ್ರೀ ಲಕ್ಷ್ಮೀನಾರಾಯಣ ಭಟ್ , ಅರಸಿನಮಕ್ಕಿ

*The world worries about disability more than disabled people do*

# 34ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರ ಉದ್ಘಾಟನೆ






**ನಿಡ್ಲೆ (ಆ. 11):** ಸೇವಾಭಾರತಿ(ರಿ.), ಕನ್ಯಾಡಿ ಇದರ ನೇತೃತ್ವದಲ್ಲಿ ಸಬಲಿನಿ ಯೋಜನೆಯಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ (ನಿ.),ನಿಡ್ಲೆ, ಗ್ರಾಮ ಪಂಚಾಯತ್, ನಿಡ್ಲೆ ಮತ್ತು ಪ್ರೇರಣಾ ಸಂಜೀವಿನಿ ಮಹಿಳಾ ಒಕ್ಕೂಟ, ನಿಡ್ಲೆ ಇದರ ಸಹಭಾಗಿತ್ವದಲ್ಲಿ ಮಹಿಳೆಯರಿಗಾಗಿ ಉಚಿತ 34ನೇ ಟೈಲರಿಂಗ್ ತರಬೇತಿ ಶಿಬಿರದ ಉದ್ಘಾಟನೆ ಆಗಸ್ಟ್ 11ರಂದು ನಿಡ್ಲೆಯಲ್ಲಿ ನಡೆಯಿತು.

ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ನಿಡ್ಲೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ (ನಿ.), ಅಧ್ಯಕ್ಷರಾದ ಶ್ರೀ ಧನಂಜಯ ಗೌಡ ರವರು ಚಾಲನೆ ನೀಡಿ **"ನಾವು ಯಾವಾಗಲೂ ಇನ್ನೊಬ್ಬರ ನೆರಳಿನಲ್ಲಿ ಬದುಕದೆ ಸ್ವ – ಉದ್ಯೋಗ ಮಾಡುವುದರ ಮೂಲಕ ನಮ್ಮ ಬದುಕಿಗೆ ನಾವೇ ದಾರಿದೀಪವಾಗಬೇಕು, ಈ ತರಬೇತಿ ಶಿಬಿರವು ಸ್ವ-ಉದ್ಯೋಗದ ಕಡೆಗೆ ಮಹತ್ವದ ಹೆಜ್ಜೆಯಾಗಿದೆ"** ಎಂದರು.

ಕನ್ಯಾಡಿ ಸೇವಾಭಾರತಿ(ರಿ.), ಕಾರ್ಯದರ್ಶಿ ಶ್ರೀ ಬಾಲಕೃಷ್ಣ ರವರು ಮಾತನಾಡಿ ಮಹಿಳೆಯರು ಸ್ವಂತ ಕೆಲಸವನ್ನು ಮಾಡಿ ಸಮಾಜದಲ್ಲಿ ಗುರುತಿಸಿಕೊಳ್ಳುತ್ತೇವೆ ಎಂಬ ಧೈರ್ಯ ಇದ್ದರೆ ಯಾವುದು ಅಸಾಧ್ಯವಾದ ಮಾತಲ್ಲ ಎಲ್ಲವೂ ಸಾಧ್ಯ ಎಂದು ಶುಭಹಾರೈಸಿದರು.

ನಿಡ್ಲೆ, ಗ್ರಾಮ ಪಂಚಾಯತ್ ಸದಸ್ಯರಾದ ಶ್ರೀ ಮೋಹನ್ ಪೂಜಾರಿ, ನಿಡ್ಲೆ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶ್ರೀ ದಿನೇಶ್, ಗ್ರಾಮಪಂಚಾಯತ್ ಸದಸ್ಯರಾದ ಶ್ರೀಮತಿ ಹೇಮಾವತಿ, ಟೈಲರಿಂಗ್ ತರಬೇತುದಾರರಾದ ಶ್ರೀಮತಿ ರಜನಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶಿಬಿರದಲ್ಲಿ ಒಟ್ಟು 32 ಮಂದಿ ಮಹಿಳಾ ಶಿಬಿರಾರ್ಥಿಗಳು ಭಾಗವಹಿಸಿದ್ದು, ಮಹಿಳಾ ಸಬಲೀಕರಣದತ್ತ ಮತ್ತೊಂದು ಮಹತ್ವದ ಹೆಜ್ಜೆಯಾಗಿದೆ. ಕಾರ್ಯಕ್ರಮದಲ್ಲಿ ಶ್ರೀಮತಿ ಹೇಮಾವತಿ ಸ್ವಾಗತಿಸಿ, ಸೇವಾಭಾರತಿಯ ಡಾಕ್ಯುಮೆಂಟೇಶನ್, ಮೋನಿಟರಿಂಗ್ ಮತ್ತು ಇವ್ಯಾಲ್ಯೂಯೇಷನ್ ಕೋ – ಆರ್ಡಿನೇಟರ್ ಸುಮ ನಿರೂಪಿಸಿ, ಶ್ರೀಮತಿ ಸುಮನ ಧನ್ಯವಾದವಿತ್ತರು.

# ಸೇವಾಭಾರತಿಗೆ ಕೇಂದ್ರ ಸರ್ಕಾರದಿಂದ FCRA ನೋಂದಣಿ ಪ್ರಮಾಣ ಪತ್ರ

ಭಾರತ ಸರ್ಕಾರದ ಗೃಹ ವ್ಯವಹಾರಗಳ ಸಚಿವಾಲಯ, ನವದೆಹಲಿಯಿಂದ ನೀಡಲಾಗುವ ವಿದೇಶಿ ಕೊಡುಗೆ (ನಿಯಂತ್ರಣ) ಕಾಯಿದೆ, 2010 ಅಡಿ ಸೇವಾಭಾರತಿಗೆ ಜುಲೈ 23ರಂದು ಅಧಿಕೃತವಾಗಿ FCRA ನೋಂದಣಿ ಪ್ರಮಾಣಪತ್ರ ಲಭಿಸಿರುವುದನ್ನು ತಿಳಿಸಲು ಸಂತೋಷ ಪಡುತ್ತೇವೆ.

ಈ ಪ್ರಮಾಣಪತ್ರವು ಸೇವಾಭಾರತಿಯ ಸಾಮಾಜಿಕ ಸೇವೆ, ಶಿಕ್ಷಣ, ಆರೋಗ್ಯ, ಗ್ರಾಮಾಭಿವೃದ್ಧಿ, ಮಹಿಳಾ ಸಬಲೀಕರಣ, ಪರಿಸರ ಸಂರಕ್ಷಣೆ, ವಿಕಲಚೇತನ ಕಲ್ಯಾಣ, ಸೇವಾಧಾಮ ಸೇವಾ ಚಟುವಟಿಕೆಗಳನ್ನು ವಿಸ್ತರಿಸಲು ಮಹತ್ವದ ಹೆಜ್ಜೆಯಾಗಿದೆ.

ಈ ಮೂಲಕ ನಮ್ಮ ಸಂಸ್ಥೆಗೆ ವಿದೇಶಗಳಿಂದ ಬರುವ ಸಹಾಯ, ಅನುದಾನ ಮತ್ತು ದೇಣಿಗೆಯನ್ನು ಸಂಪೂರ್ಣವಾಗಿ ಕಾನೂನುಬದ್ಧವಾಗಿ ಸ್ವೀಕರಿಸಿ, ಅವುಗಳನ್ನು ಪಾರದರ್ಶಕವಾಗಿ ಸಮಾಜಮುಖಿ ಸೇವಾ ಕಾರ್ಯಗಳಿಗೆ ಬಳಸಿಕೊಳ್ಳುವ ಅವಕಾಶ ದೊರೆತಿರುವುದು ಹೆಮ್ಮೆಯ ವಿಷಯ.

## ಸೇವಾಭಾರತಿ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ ಸಹಕರಿಸುವಂತೆ ಮನವಿ



**ಉಜಿರೆ (ಆ. 21):** ಉಜಿರೆ ಬೆನಕ ಹೆಲ್ತ್ ಸೆಂಟರ್‌ನ ಅಧ್ಯಕ್ಷರು ಮತ್ತು ಮೆಡಿಕಲ್ ಡೈರೆಕ್ಟರ್ ಡಾ. ಗೋಪಾಲಕೃಷ್ಣ ಕೆ ರವರನ್ನು ಆಗಸ್ಟ್ 21 ರಂದು ಭೇಟಿ ಮಾಡಿ ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಿಸುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ ಸಹಕರಿಸುವಂತೆ ಮನವಿ ಮಾಡಲಾಯಿತು.

ಸೇವಾಧಾಮ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್, ಸಂಚಾಲಕರು ಪುರಂದರ್ ರಾವ್, ಸೇವಾಭಾರತಿ ಫಂಡ್ ರೈಸಿಂಗ್ ಮತ್ತು ಮಾರ್ಕೆಟಿಂಗ್ ಮ್ಯಾನೇಜರ್ ಶ್ರೀ ಆಶ್ರಿತ್.ಸಿ.ಪಿ ಉಪಸ್ಥಿತರಿದ್ದರು



ಶಾಸಕರ ನೇತೃತ್ವದಲ್ಲಿ, ಸಮೃದ್ಧ ಬೈಂದೂರು ಯೋಜನೆಯಲ್ಲಿ ಬೈಂದೂರು ತಾಲೂಕಿನ ಪಡುವರಿ ಗ್ರಾಮದ ಹೇನಬೇರು ಶಾಲೆಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಗಾಯ ನಿರ್ವಹಣೆ ಮತ್ತು ಪುನಶ್ಚೇತನ ಕೇಂದ್ರದ ಉದ್ದೇಶಿತ ಕಟ್ಟಡವನ್ನು ವೀಕ್ಷಿಸಲು ಸೇವಾಭಾರತಿ ಖಜಾಂಚಿ ಮತ್ತು ಸೇವಾಧಾಮ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ರವರು ಆಗಸ್ಟ್ 05 ರಂದು ಭೇಟಿ ಮಾಡಿ, ಗಾಯ ನಿರ್ವಹಣೆ ಪುನಶ್ಚೇತನ ಕೇಂದ್ರದ ಕೆಲಸಕ್ಕೆ ಪ್ರಶಂಸೆಯನ್ನು ವ್ಯಕ್ತಪಡಿಸಿದರು.

ಈ ಸಂಧರ್ಭದಲ್ಲಿ ಬೈಂದೂರಿನ ಕಾರ್ಯಕರ್ತರಾದ ಶ್ರೀ ಗಜೇಂದ್ರ ಎಸ್ ಬೇಲೆಮನೆ, ಶ್ರೀಮತಿ ಅನುರಾಧ ಗಂಟಿಹೊಳೆ, ಶ್ರೀಮತಿ ಅನಿತಾ ಆರ್ ಕೆ, ಶ್ರೀ ಶೋಧನ್ ಮಲ್ಪೆ, ಶ್ರೀ ದಿನಕರ್ ಗುರುವಾಯನಕೆರೆ, ಶ್ರೀ ಮಂಜುನಾಥ್ ಕಬ್ಬೆ, ಶ್ರೀ ಸುಭಾಷ್ ಶೆಟ್ಟಿ, ಶ್ರೀ ಪ್ರದೀಪ್ ಇಸ್ತ್ರಿ ಹಾಗೂ ಸೇವಾಭಾರತಿ ಟ್ರಸ್ಟಿ ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ ಉಪಸ್ಥಿತರಿದ್ದರು.

## ಕನ್ಯಾಡಿ ಸೇವಾಭಾರತಿ ನೂತನ ಕಟ್ಟಡ ನಿರ್ಮಾಣಕ್ಕೆ ಶ್ರೀ ಗೋವಿಂದ ಸುವರ್ಣ ಪೊಂಗಾರು ರವರಿಂದ 55 ಬ್ಯಾಗ್ ಸಿಮೆಂಟ್ ಗೆ ರೂ. 20,000/– ದೇಣಿಗೆ




**ಕನ್ಯಾಡಿ (ಆ. 07):** ಕನ್ಯಾಡಿ ಗಣೇಶೋತ್ಸವ ಸಮಿತಿಯ ಕಾರ್ಯಾಧ್ಯಕ್ಷರಾದ ಶ್ರೀ ಗೋವಿಂದ ಸುವರ್ಣ ಪೊಂಗಾರು ರವರು ಕನ್ಯಾಡಿ ಸೇವಾನಿಕೇತನಕ್ಕೆ ಆಗಸ್ಟ್ 7 ರಂದು ಭೇಟಿ ನೀಡಿ ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಿಸುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ 55 ಬ್ಯಾಗ್ ಸಿಮೆಂಟ್‌ಗೆ ರೂ. 20,000/– ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಸೇವಾಧಾಮ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಧನ್ಯವಾದವಿತ್ತರು.

## ಸೇವಾಭಾರತಿ ಕನ್ಯಾಡಿಯಿಂದ ಉಡುಪಿ LIC ಡಿವಿಷನಲ್ ಆಫೀಸ್‌ನ ಭೇಟಿ



LIC ಆಫ್ ಇಂಡಿಯಾ ಉಡುಪಿ ಡಿವಿಷನ್‌ನ ಸೀನಿಯರ್ ಡಿವಿಷನ್ ಮ್ಯಾನೇಜರ್ ಶ್ರೀ ಗಣಪತಿ ಭಟ್, ಡಿವಿಷನ್ ಮ್ಯಾನೇಜರ್ – ಸೇಲ್ಸ್ ಶ್ರೀ ದುರ್ಗರಾಮ್ ಶೆಣೈ ಮತ್ತು ಸಿಬ್ಬಂದಿ ಶ್ರೀಮತಿ ಪ್ರಭಾ ಮತ್ತು ಶ್ರೀ ಬಾಲಕೃಷ್ಣ ಶೆಣೈ ಯವರನ್ನು ಆಗಸ್ಟ್ 05 ರಂದು ಭೇಟಿ ಮಾಡಿ ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಾಣವಾಗುವ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ CSR ಅನುದಾನವನ್ನು ಒದಗಿಸುವಂತೆ ಮನವಿ ಮಾಡಲಾಯಿತು.

ಈ ಸಂದರ್ಭದಲ್ಲಿ ಸೇವಾಧಾಮ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್, ಸೇವಾಭಾರತಿ ಟ್ರಸ್ಟಿ ಶ್ರೀ ವಿಷ್ಣು ಪ್ರಸಾದ್ ತೆಂಕಿಲ್ಲಾಯ ಮತ್ತು ಸ್ವಯಂಸೇವಕರದ ಶ್ರೀ ಜಯರಾಜ್ ಉಪಸ್ಥಿತರಿದ್ದರು.

# ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಬೆನ್ನೆಲುಬಾಗುವಿರಾ?

## ಕನ್ಯಾಡಿಯಲ್ಲಿ ನಿರ್ಮಾಣವಾಗುತ್ತಿದೆ ನೂತನ "ಸೇವಾಧಾಮ" ಪುನಶ್ಚೇತನ ಕೇಂದ್ರ





ಸೇವಾಭಾರತಿ ಸಂಸ್ಥೆಯು ಕಳೆದ 20 ವರ್ಷಗಳಲ್ಲಿ ಸಾಮಾಜಿಕವಾಗಿ ಅನೇಕ ಕ್ಷೇತ್ರಗಳಲ್ಲಿ ಸೇವಾ ಕಾರ್ಯ –ಗಳನ್ನು ಮಾಡುತ್ತ ಬರುತ್ತಿದ್ದು, ಸಬಲಿನಿ ಯೋಜನೆಯಡಿ ಮಹಿಳೆಯರ ಆರ್ಥಿಕ ಸಬಲಿಕರಣಕ್ಕಾಗಿ ಉಚಿತ ಟೈಲರಿಂಗ್ ತರಬೇತಿಗಳು, ಆರೋಗ್ಯಮ್ ಯೋಜನೆಯಡಿ ಆಂಬುಲೆನ್ಸ್ ಸೇವೆ ಹಾಗೂ ರಕ್ತದಾನ ಶಿಬಿರಗಳು, ಸೇವಾಧಾಮ ಯೋಜನೆ –ಯಡಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ, ಈ ಮೂರು ಯೋಜನೆಗಳು ಯಶಸ್ವಿಯಾಗಿ ನಡೆಯುತ್ತಿದೆ.

ನಮ್ಮ ಸಂಸ್ಥೆಯ ಸಮಾಜಮುಖಿ ಚಟುವಟಿಕೆಗಳನ್ನು ಉತ್ತೇಜಿಸುವ ದೃಷ್ಟಿಯಿಂದ ಕನ್ಯಾಡಿಯಲ್ಲಿ 2023ನೇ ವರ್ಷದಲ್ಲಿ ಸರ್ಕಾರವು ಒಟ್ಟು 10 ಸೆಂಟ್ಸ್ ಜಮೀನನ್ನು ನಮ್ಮ ಸಂಸ್ಥೆಯ ಕಟ್ಟಡ ನಿರ್ಮಾಣ ಉದ್ದೇಶಕ್ಕಾಗಿ ಮಂಜೂರುಗೊಳಿಸಿದೆ. ಪ್ರಸಕ್ತ ವರ್ಷದಲ್ಲಿ ಸೇವಾಭಾರತಿಯ ಕಾರ್ಯಚಟುವಟಿಕೆಗಳಿಗೆ ಹಾಗೂ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ ಪುನಶ್ಚೇತನ ಕೇಂದ್ರದ ಉದ್ದೇಶಕ್ಕಾಗಿ ಕಟ್ಟಡ ನಿರ್ಮಾಣಕ್ಕೆ ಮುಂದಾಗಿದ್ದೇವೆ. ಅಲ್ಲದೆ ಧನಸಹಾಯ ನೀಡುವಂತೆ ಬೇರೆ ಬೇರೆ ಸಂಸ್ಥೆಗಳಿಗೆ ಮನವಿಯನ್ನೂ ಮಾಡಿದ್ದೇವೆ. ಈ ಮನವಿಗೆ ಸ್ಪಂದಿಸಿ ಮುಂಬರುವ ದಿನಗಳಲ್ಲಿ ಕಿಂಚಿತ್ತಾದರೂ ಸಿಗಬಹುದೆಂಬ ಆಶಾವಾದದಲ್ಲಿ ನಾವಿದ್ದೇವೆ. ನಮ್ಮ ಸಂಸ್ಥೆಯ ಕಟ್ಟಡದ ನಿರ್ಮಾಣಕ್ಕಾಗಿ ಒಟ್ಟು ಮೊತ್ತ ರೂ 3,05,72,580/– ಅಂದಾಜಿಸಲಾಗಿದ್ದು, ಇದರ ಮೊದಲ ಹಂತವಾಗಿ ನೆಲಮಹಡಿಗೆ ಮಂಗಳೂರಿನ Mangalore Refinery and petrochemicals Limited (MRPL) ನಿಂದ ರೂಪಾಯಿ 42 ಲಕ್ಷದಷ್ಟು ಮಂಜೂರಾಗಿದ್ದು, ನಿರ್ಮಾಣಕಾರ್ಯ ಭರದಿಂದ ಸಾಗುತ್ತಿದೆ. ಆದರೆ ಅಡಿಪಾಯ ಹಾಗೂ ಬೇಸ್ಮೆಂಟ್‌ನಲ್ಲಿ ಶೌಚಾಲಯ, ಒಂದು ಸೆಕ್ಯೂರಿಟಿ ರೂಮ್, ಸಂಪು ಹಾಗೂ ಪಾರ್ಕಿಂಗ್ ವ್ಯವಸ್ಥೆಗಳನ್ನು ನಿರ್ಮಾಣ ಮಾಡಬೇಕಿದೆ. ಇದಕ್ಕಾಗಿ ಒಟ್ಟು 60 ಲಕ್ಷ ರೂಪಾಯಿಗಳಷ್ಟು ವೆಚ್ಚವಾಗಲಿದೆ.

**ಒಟ್ಟು ಮೊತ್ತ ರೂ. 3,05,72,580/– ಅಂದಾಜಿಸಲಾಗಿದ್ದು. ಇದರ ನೆಲಮಹಡಿಗೆ ಮಂಗಳೂರಿನ MRPL ರೂ. 42 ಲಕ್ಷದಷ್ಟು ನೀಡಲಿದೆ.**

ಈವರೆಗೂ ತಾವು ನಮ್ಮ ಎಲ್ಲಾ ಯೋಜನೆಗಳಿಗೂ ಕೈಲಾದಷ್ಟು ಸಹಾಯ ನೀಡುತ್ತಿದ್ದು, ಈ ಬಾರಿ ಈ ಕಟ್ಟಡ ಕಟ್ಟಲು ಸಹಾಯ ನೀಡುವಿರೆಂದು ಭಾವಿಸಿದ್ದೇವೆ. ಈ ಕಟ್ಟಡವು ನಿರ್ಮಾಣಗೊಂಡು ಕಾರ್ಯಾಚರಿಸಲು ಪ್ರಾರಂಭಿಸಿದ್ದಲ್ಲಿ ರಾಜ್ಯದಾದ್ಯಂತವಿರುವ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಆಶಾಕಿರಣವಾಗಿ ಮಾದರಿಯಾದ ಪುನಶ್ಚೇತನ ಕೇಂದ್ರವಾಗುವುದರಲ್ಲಿ ಸಂಶಯವಿರುವುದಿಲ್ಲ. ಆದಕಾರಣ ನಮ್ಮ ಸಂಸ್ಥೆಗೆ ಧನಸಹಾಯ ನೀಡಿ ಈ ಯೋಜನೆಯನ್ನು ಯಶಸ್ವಿ–ಗೊಳಿಸಿಕೊಡಬೇಕೆಂದು ತಮ್ಮಲ್ಲಿ ಮತ್ತೊಮ್ಮೆ ಕಳಕಳಿಯ ವಿನಂತಿ.

### BANK ACCOUNT DETAILS

SEVABHARATHI REGD

237887292400920@cnrb

Scan & Pay also

A/c Name : Sevabharathi
Current A/c No : 120000400920
IFSC : CNRB0010246
Canara Bank, Dharmasthala Branch

*Disability cannot stop me from becoming a complete personality*

# ಮುಂಬೈಯ The Mani and Minoo Desai Charitable Trust ನಿಂದ ನೂತನ ಕಟ್ಟಡಕ್ಕೆ ರೂ. 15,00,000/– ದೇಣಿಗೆ



**ಕನ್ಯಾಡಿ (ಆ. 23):** ಮುಂಬೈನ The Mani and Minoo Desai Charitable Trust ನಿಂದ ಶ್ರೀ ವಿಷ್ಣುಮೂರ್ತಿ ರಾವ್ ರವರು ಆಗಸ್ಟ್ 23 ರಂದು ಕನ್ಯಾಡಿ ಸೇವಾನಿಕೇತನಕ್ಕೆ ಭೇಟಿ ನೀಡಿ ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ ರೂ. 15,00,000/– ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಸೇವಾಧಾಮ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಮತ್ತು ಸೇವಾಭಾರತಿ ಅಧ್ಯಕ್ಷರಾದ ಶ್ರೀಮತಿ ಸ್ವರ್ಣಗೌರಿ ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಧನ್ಯವಾದವಿತ್ತರು. ಈ ಸಂದರ್ಭದಲ್ಲಿ ಶ್ರೀ ಸುಬೋಧ್ ರಾವ್ ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಬೆಂಗಳೂರಿನ ಕೆಮ್ ಟ್ರೆಂಡ್ ಕೆಮಿಕಲ್ಸ್ ಕಂಪೆನಿ ಪ್ರೈವೇಟ್ ಲಿಮಿಟೆಡ್‌ನಿಂದ ನೂತನ ಕಟ್ಟಡಕ್ಕೆ ರೂ. 5,00,000/– ದೇಣಿಗೆ

**ಬೆಂಗಳೂರು (ಆ. 19):** ಕೆಮ್ ಟ್ರೆಂಡ್ ಕೆಮಿಕಲ್ಸ್ ಕಂಪೆನಿ ಪ್ರೈವೇಟ್ ಲಿಮಿಟೆಡ್ ನಿಂದ ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ ರೂ. 3,00,000/– ಮತ್ತು ಬೈಂದೂರು ಶಾಸಕರ ನೇತೃತ್ವದಲ್ಲಿ ಸಮೃದ್ಧ ಬೈಂದೂರು ಯೋಜನೆಯಡಿಯಲ್ಲಿ ಬೈಂದೂರು ತಾಲೂಕಿನ ಪಡುವರಿ ಗ್ರಾಮದ ಹೇನಬೇರು ಶಾಲೆಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಗಾಯ ನಿರ್ವಹಣೆ ಮತ್ತು ಪುನಶ್ಚೇತನ ಕೇಂದ್ರದ ಉದ್ದೇಶಿತ ಕಟ್ಟಡ "ಸೇವಾಧಾಮಕ್ಕೆ" ರೂ. 2,00,000/– ದೇಣಿಗೆಯನ್ನು ನೀಡಿ ಸತತ 7 ವರ್ಷಗಳಿಂದ CSR ಫಂಡ್ ನೀಡಿ ಸಹಕರಿಸುತ್ತಿದ್ದಾರೆ.

## ಮಂಗಳೂರಿನ ಕಾರ್ಡೋರ್ಲೈಟ್ ಸ್ಪೆಷಾಲಿಟಿ ಕೆಮಿಕಲ್ಸ್ ಇಂಡಿಯಾ ಲಿಮಿಟೆಡ್ ಲಯಾಬಿಲಿಟಿ ಪಾರ್ಟ್ನರ್‌ಶಿಫ್‌ನಿಂದ ರೂ.1,00,000/– ದೇಣಿಗೆ

**ಬೆಂಗಳೂರು (ಆ. 21):** ಮಂಗಳೂರು, ಕಾರ್ಡೋರ್ಲೈಟ್ ಸ್ಪೆಷಾಲಿಟಿ ಕೆಮಿಕಲ್ಸ್ ಇಂಡಿಯಾ ಲಿಮಿಟೆಡ್ ಲಯಾಬಿಲಿಟಿ ಪಾರ್ಟ್ನರ್‌ಶಿಫ್‌ನಿಂದ ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ ರೂ. 1,00,000/– ದೇಣಿಗೆಯನ್ನು ನೀಡಿ ಕಟ್ಟಡ ನಿರ್ಮಾಣ ಶೀಘ್ರವಾಗಿ ನೆರವೇರುವಂತೆ ಶುಭಹಾರೈಸಿದ್ದಾರೆ.

## ಬೆಂಗಳೂರಿನ ಫಿಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ನಿಂದ ನೂತನ ಕಟ್ಟಡಕ್ಕೆ ರೂ.5,00,000/– ದೇಣಿಗೆ

**ಬೆಂಗಳೂರು (ಆ. 21):** ಫಿಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ನಿಂದ ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ ರೂ. 5,00,000/– ದೇಣಿಗೆಯನ್ನು ನೀಡಿ ಕಟ್ಟಡ ನಿರ್ಮಾಣ ಶೀಘ್ರವಾಗಿ ನೆರವೇರುವಂತೆ ಶುಭಹಾರೈಸಿದ್ದಾರೆ.

## ಸೇವಾಧಾಮದಲ್ಲಿ ಪುನಶ್ಚೇತನಗೊಂಡ ಸನಿವಾಸಿಗಳ ಅನಿಸಿಕೆ

ಪ್ರದೀಪ್ ಆದ ನಾನು ಚಿಕ್ಕಮಗಳೂರು ಜಿಲ್ಲೆಯ ಕೆ ಆರ್ ಪೇಟೆ ಕುಂದೂರಿನವನು ನಾನು ದಿನಾಂಕ 10/04/2024 ರಂದು ಮರದಿಂದ ಕೈ ಜಾರಿ ಕೆಳಕ್ಕೆ ಬಿದ್ದಿರುತ್ತೇನೆ. ನನ್ನನ್ನು ತೋಟದ ಮಾಲಿಕ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ. ಅಲ್ಲಿ ನನಗೆ ಆಪರೇಷನ್ ಆದ ಬಳಿಕ ನಾನು ಬೆನ್ನುಹುರಿ ಅಪಘಾತಕ್ಕೆ ಒಳಗಾಗಿದ್ದೇನೆ ಎಂದು ತಿಳಿಸಿದರು ನಂತರ ನಾನು 2 ತಿಂಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ನಂತರ ಮನೆಗೆ ಬಂದಿರುತ್ತೇನೆ. ನಾನು ಬೆನ್ನುಹುರಿ ಅಪಘಾತಕ್ಕೊಳಗಾಗಿ ಮಲಗಿದಲ್ಲೇ ಇದ್ದಾಗ. ನನಗೆ ಪರಿಚಯವಾದದ್ದು ಜನಾರ್ಧನ ಸರ್ ಮತ್ತು ನಾಗಾರ್ಜುನ್ ಸರ್. ನನ್ನನು ಸೇವಾಧಾಮಕ್ಕೆ ಬರುವಂತೆ ಹೇಳಿದರು. ನಂತರ ನಾನು ಮನೆಯವರ ಜೊತೆ ಮಾತಾಡಿ ದಿನಾಂಕ 03/02/2025 ಕ್ಕೆ ಸೇವಾದಾಮಕ್ಕೆ ಬಂದ ನಂತರ ನನ್ನನ್ನು ವಿರೂಪಾಕ್ಷ ಸರ್ ಮತ್ತು ವಿಖ್ಯಾತಿ ಮೇಡಂರನ್ನು ಗುರುತಿಸಿದರು. ವಿರೂಪಾಕ್ಷಿಯವರು ತುಂಬಾ ಚೆನ್ನಾಗಿ ಥೆರಪಿಯನ್ನು ಹೇಳಿಕೊಟ್ಟರು ಹಾಗೂ ವಿಖ್ಯಾತಿ ಮೇಡಂ ಕೂಡ ಹೇಳಿಕೊಟ್ಟರು ಮತ್ತು ಆಂಟೋನಿ ಸರ್ ನನಗೆ ಯೋಗಾಸನ ಮತ್ತು ವೀಲ್‌ಚೇರ್ ಸ್ಕಿಲ್ ಕಲಿಸಿಕೊಟ್ಟರು ಹಾಗೂ ಸತೀಶ್ ಅವರು ತುಂಬಾ ರುಚಿಕರವಾದ ಅಡುಗೆಯನ್ನು ಮಾಡಿಕೊಡುತ್ತಾ ಇದ್ದರು ಮತ್ತು ರಾಜೀವಿ ಅಕ್ಕ ಕೂಡ ಸೇವಾಧಾಮವನ್ನು ಶುಚಿಯಾಗಿಟ್ಟು ಮತ್ತು ಎಲ್ಲರನ್ನೂ ಆರೈಕೆ ಮಾಡುತ್ತಿದ್ದರು ಮತ್ತು ನಮ್ಮಂತವರನ್ನು ಗುರುತಿಸುವ ಸೇವಾಧಾಮ ಸಂಸ್ಥೆಗೆ ನನ್ನ ಧನ್ಯವಾದಗಳು!.

ಇತಿ ನಿಮ್ಮ ವಿಶ್ವಾಸಿ, **ಪ್ರದೀಪ್ ಚಿಕ್ಕಮಗಳೂರು**

## ಸೇವಾಭಾರತಿ ನೂತನ ಕಟ್ಟಡ ನಿರ್ಮಾಣಕ್ಕೆ ಹಿಂದೂ ಧಾರ್ಮಿಕ ಸೇವಾ ಸಮಿತಿ, ಕನ್ಯಾಡಿ ಯವರಿಂದ ರೂ. 25,000/– ದೇಣಿಗೆ



**ಕನ್ಯಾಡಿ (ಆ .08):** ಕನ್ಯಾಡಿಯ ಹಿಂದೂ ಧಾರ್ಮಿಕ ಸೇವಾ ಸಮಿತಿಯ ಸದಸ್ಯರು ಕನ್ಯಾಡಿ ಸೇವಾನಿಕೇತನಕ್ಕೆ ಆಗಸ್ಟ್ 08 ರಂದು ಭೇಟಿ ನೀಡಿ. ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಕನ್ಯಾಡಿಯಲ್ಲಿ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ ರೂ. 25,000/–ದ ಚೆಕ್ ನೀಡಿ ಕಟ್ಟಡದ ನಿರ್ಮಾಣ ಶೀಘ್ರವಾಗಿ ನೆರವೇರುವಂತೆ ಶುಭಹಾರೈಸಿದರು. ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ರವರು ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಧನ್ಯವಾದವಿತ್ತರು.

ಈ ಸಂದರ್ಭದಲ್ಲಿ ಕನ್ಯಾಡಿ ಹಿಂದೂ ಧಾರ್ಮಿಕ ಸೇವಾ ಸಮಿತಿಯ ಅಧ್ಯಕ್ಷರಾದ ಶ್ರೀ ರಾಜೇಶ್ ಪಿ, ಕಾರ್ಯದರ್ಶಿ ಶ್ರೀ ಗಣೇಶ್ ಬಜಿಲ, ಉಪಾಧ್ಯಕ್ಷರಾದ ಶ್ರೀ ಅರುಣ್ ನಾಯ್ಕ್, ಸಂಯೋಜಕರಾದ ಶ್ರೀ ರಾಘವ ಕುರ್ಮಾಣಿ, ಸಹಕಾರ್ಯದರ್ಶಿ ಶ್ರೀ ವಿದ್ಯಾಧರ್ ರೈ, ಗಣೇಶೋತ್ಸವ ಸಮಿತಿ ಅಧ್ಯಕ್ಷರಾದ ಶ್ರೀ ಚೇತನ್ ಗುಡಿಗಾರ್, ಕಾರ್ಯಾಧ್ಯಕ್ಷರಾದ ಶ್ರೀ ಗೋವಿಂದ ಸುವರ್ಣ ಪೊಂಗರು, ಸದಸ್ಯರಾದ ಶ್ರೀ ಮಹಾಬಲ ನಾಯ್ಕ ಮತ್ತು ಶ್ರೀ ಉಮೇಶ ಆಚಾರ್ಯ ಉಪಸ್ಥಿತರಿದ್ದರು.

## ಕನ್ಯಾಡಿ ಶ್ರೀ ಕೃಷ್ಣ ಜನ್ಮಾಷ್ಟಮಿ ಸಮಿತಿಯವರಿಂದ ಸೇವಾಭಾರತಿ ನೂತನ ಕಟ್ಟಡ ನಿರ್ಮಾಣಕ್ಕೆ ರೂ. 33,333/– ದೇಣಿಗೆ



**ಕನ್ಯಾಡಿ (ಆ.15):** 22ನೇ ವರ್ಷದ ಸಾರ್ವಜನಿಕ ಶ್ರೀ ಕೃಷ್ಣ ಜನ್ಮಾಷ್ಟಮಿಯ ಪ್ರಯುಕ್ತ ಮೊಸರು ಕುಡಿಕೆ ಉತ್ಸವದಂದು ಕನ್ಯಾಡಿ–॥ ಶ್ರೀ ಕೃಷ್ಣ ಜನ್ಮಾಷ್ಟಮಿ ಸಮಿತಿಯವರಿಂದ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಕನ್ಯಾಡಿಯಲ್ಲಿ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ ರೂ. 33,333/– ದೇಣಿಗೆಯನ್ನು ನೀಡಿ ಕಟ್ಟಡದ ನಿರ್ಮಾಣ ಶೀಘ್ರವಾಗಿ ನೆರವೇರುವಂತೆ ಶುಭಹಾರೈಸಿದರು. ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ರವರು ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಧನ್ಯವಾದವಿತ್ತರು.

ಈ ಸಂಧರ್ಭದಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಸಮಿತಿಯ ಅಧ್ಯಕ್ಷರಾದ ಶ್ರೀ ಪ್ರಭಾಕರ್ ಗೌಡ ಬೊಳ್ಮಾ, ಉಪಾಧ್ಯಕ್ಷರಾದ ಶ್ರೀ ಯತೀಶ್ ಸುವರ್ಣ, ಸಂಯೋಜಕರಾದ ಶ್ರೀ ರಾಜೇಂದ್ರ ಅಜ್ರಿ, ಉದ್ಘಾಟಕರಾದ ಶ್ರೀ ಲಯನ್ ದೇವದಾಸ ಎಲ್ ಶೆಟ್ಟಿ ಹಿಬರೋಡಿ, ಸೌತಡ್ಕ ಮಹಾಗಣಪತಿ ದೇವಸ್ಥಾನದ ಪ್ರಧಾನ ಅರ್ಚಕರಾದ ಶ್ರೀ ಸತ್ಯಪ್ರಿಯ ಕಲ್ಲೂರಾಯ, ಧರ್ಮಸ್ಥಳ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ವಿಮಲಾ ಪರಮೇಶ್ವರ, ಶಿವ ಪಾರ್ವತಿ ಕಲ್ಯಾಣ ಮಂಟಪ ಮಾಲಕರು ಶ್ರೀ ಗಿರೀಶ್ ಕುದ್ರೆಂತ್ತಾಯ, ಧರ್ಮಸ್ಥಳ ಹಾಲು ಉತ್ಪಾದಕರ ಸಹಕಾರಿ ಸಂಘ ಅಧ್ಯಕ್ಷರಾದ ಶ್ರೀ ದೇವಸ್ಯ ಟಿ, ಬೃಂದಾವನ ಮನೆ ಕನ್ಯಾಡಿ 2 ಶ್ರೀಮತಿ ಪವಿತ್ರ ಸುಕುಮಾರ ಶೆಟ್ಟಿ, ಧರ್ಮಸ್ಥಳ ಗ್ರಾ.ಪಂ. ಸದಸ್ಯರಾದ ಶ್ರೀ ವಸಂತ ನಾಯ್ಕ, ಶ್ರೀಮತಿ ರೇವತಿ, ಶ್ರೀ ಕೆ ನಂದ ಅಧ್ಯಕ್ಷರು ಎಸ್ ಡಿ ಎಂ ಸಿ , ಕನ್ಯಾಡಿ –2 ಪ್ರ.ಮು.ಶಿ ಶ್ರೀಮತಿ ಪುಷ್ಪಾ ಎನ್ ರವರು ಉಪಸ್ಥಿತರಿದ್ದರು.

## ಮಾಜಿ ಸೈನಿಕರ ಸಂಘ (ರಿ.), ಬೆಳ್ತಂಗಡಿ ತಾಲೂಕು ಇವರಿಂದ ಸೇವಾಭಾರತಿ ನೂತನ ಕಟ್ಟಡ ನಿರ್ಮಾಣಕ್ಕೆ ರೂ. 25,000/– ದೇಣಿಗೆ





**ಕನ್ಯಾಡಿ (ಆ .23):** ಮಾಜಿ ಸೈನಿಕರ ಸಂಘ (ರಿ), ಬೆಳ್ತಂಗಡಿ ತಾಲೂಕು ಇವರಿಂದ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಕನ್ಯಾಡಿಯಲ್ಲಿ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರಕ್ಕೆ ರೂ. 25,000/– ದೇಣಿಗೆಯನ್ನು ನೀಡಿ ಕಟ್ಟಡದ ನಿರ್ಮಾಣ ಶೀಘ್ರವಾಗಿ ನೆರವೇರುವಂತೆ ಶುಭ ಹಾರೈಸಿದರು. ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಸ್ವರ್ಣಗೌರಿ ರವರು ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ, ಧನ್ಯವಾದವಿತ್ತರು.

ಈ ಸಂಧರ್ಭದಲ್ಲಿ ಬೆಳ್ತಂಗಡಿ ಮಾಜಿ ಸೈನಿಕರ ಸಂಘದ ಅಧ್ಯಕ್ಷರಾದ ಶ್ರೀ ಮಹಮ್ಮದ್ ರಫಿ, ಜೊತೆ ಕಾರ್ಯದರ್ಶಿ ಶ್ರೀ ದಯಾನಂದ, ಮಾಜಿ ಅಧ್ಯಕ್ಷರಾದ ಶ್ರೀ ಎಸ್ ಕೃಷ್ಣ ಭಟ್, ಸೇವಾಭಾರತಿ ಖಜಾಂಚಿ ಶ್ರೀ ಕೆ. ವಿನಾಯಕ ರಾವ್ ಮತ್ತು ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

*I dont need easy, I just need possible*

## ಹಟ್ಟಿಯಂಗಡಿ ಶ್ರೀ ಸಿದ್ಧಿ ವಿನಾಯಕ ದೇವಸ್ಥಾನದಿಂದ ನೂತನ ಕಟ್ಟಡಕ್ಕೆ ರೂ.10,501/– ದೇಣಿಗೆ



**ಕುಂದಾಪುರ (ಆ. 29):** ಹಟ್ಟಿಯಂಗಡಿ ಶ್ರೀ ಸಿದ್ಧಿ ವಿನಾಯಕ ದೇವಸ್ಥಾನದ ವತಿಯಿಂದ ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ ರೂ. 10,501/– ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಸೇವಾಧಾಮ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ಮತ್ತು ಸೇವಾಭಾರತಿ ಟ್ರಸ್ಟಿ ಶ್ರೀ ಜಯರಾಜ್ ಸಾಲಿಯಾನ್ ಕಾನರ್ಪ ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಧನ್ಯವಾದವಿತ್ತರು. ಈ ಸಂದರ್ಭದಲ್ಲಿ ಬೈಂದೂರು ಶಾಸಕರಾದ ಶ್ರೀ ಗುರುರಾಜ್ ಗಂಟಿಹೊಳೆ, ಹಟ್ಟಿಯಂಗಡಿ ಶ್ರೀ ಸಿದ್ಧಿ ವಿನಾಯಕ ದೇವಸ್ಥಾನದ ಧರ್ಮದರ್ಶಿಗಳಾದ ಶ್ರೀ ಎಚ್.ಬಾಲಚಂದ್ರ ಭಟ್, ಶ್ರೀ ಎಲ್.ಟಿ. ತಿಮ್ಮಪ್ಪ ಉಪಸ್ಥಿತರಿದ್ದರು.

## ಬೆಳ್ತಂಗಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ(ನಿ.), ದಿಂದ ಪುನಶ್ಚೇತನ ಕೇಂದ್ರದ ನೂತನ ಕಟ್ಟಡಕ್ಕೆ ರೂ.10,000/– ದೇಣಿಗೆ



**ಬೆಳ್ತಂಗಡಿ (ಆ. 26):** ಬೆಳ್ತಂಗಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ವತಿಯಿಂದ ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಿಸುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ 25 ಬ್ಯಾಗ್ ಸಿಮೆಂಟ್‌ನ ಬಾಬ್ತು ರೂ. 10,000/– ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಸಂಘದ ಕಾರ್ಯನಿರ್ವಹಣಾಧಿಕಾರಿ ಶ್ರೀ ಪ್ರಸಾದ್ ರವರು ಸೇವಾಭಾರತಿ ಫಂಡ್ ರೈಸಿಂಗ್ ಮತ್ತು ಮಾರ್ಕೆಟಿಂಗ್ ಮ್ಯಾನೇಜರ್ ಶ್ರೀ ಆಶ್ರಿತ್ ಸಿ.ಪಿ ರವರಿಗೆ ಚೆಕ್ ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಅನುಸರಣೆ ಮತ್ತು ಹಣಕಾಸು ವ್ಯವಸ್ಥಾಪಕ ಶ್ರೀ ಮೋಹನ್. ಎಸ್ ಉಪಸ್ಥಿತರಿದ್ದರು.

## ಪುನಶ್ಚೇತನ ಕೇಂದ್ರದ ನೂತನ ಕಟ್ಟಡಕ್ಕೆ ಕಳಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ(ನಿ.), ದಿಂದ ರೂ.10,000/– ದೇಣಿಗೆ



**ಗೇರುಕಟ್ಟೆ (ಆ. 16):** ಕಳಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ(ನಿ.), ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಿಸುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ 25 ಬ್ಯಾಗ್ ಸಿಮೆಂಟ್ ಬಾಬ್ತು ರೂ. 10,000/– ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಸೇವಾಭಾರತಿ ಫಂಡ್ ರೈಸಿಂಗ್ ಮತ್ತು ಮಾರ್ಕೆಟಿಂಗ್ ಮ್ಯಾನೇಜರ್ ಶ್ರೀ ಆಶ್ರಿತ್ ಸಿ.ಪಿ ಹಾಗೂ ಕಾರ್ಯಕ್ರಮ ಸಂಯೋಜಕರಾದ ಶ್ರೀ ನಾಗಾರ್ಜುನ್ ಡಿ ಎ ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಧನ್ಯವಾದವಿತ್ತರು.

## ಪಡಂಗಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ(ನಿ.)ದಿಂದ ಪುನಶ್ಚೇತನ ಕೇಂದ್ರದ ನೂತನ ಕಟ್ಟಡಕ್ಕೆ ರೂ.10,000/– ದೇಣಿಗೆ



**ಪಡಂಗಡಿ (ಆ. 25):** ಪಡಂಗಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದಿಂದ ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಿಸುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ 25 ಬ್ಯಾಗ್ ಸಿಮೆಂಟ್ ಬಾಬ್ತು ರೂ. 10,000/– ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಸೇವಾಭಾರತಿ ಫಂಡ್ ರೈಸಿಂಗ್ ಮತ್ತು ಮಾರ್ಕೆಟಿಂಗ್ ಮ್ಯಾನೇಜರ್ ಶ್ರೀ ಆಶ್ರಿತ್ ಸಿ.ಪಿ ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಧನ್ಯವಾದವಿತ್ತರು.

## ಸೇವಾಭಾರತಿ ನೂತನ ಕಟ್ಟಡ ನಿರ್ಮಾಣಕ್ಕೆ 33ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರದ ಶಿಬಿರಾರ್ಥಿಗಳಿಂದ ರೂ. 5,210/– ದೇಣಿಗೆ



**ತುಂಬೆತಡ್ಕ (ಜು.02):** ತುಂಬೆತಡ್ಕದಲ್ಲಿ ನಡೆದ 33ನೇ ಉಚಿತ ಟೈಲರಿಂಗ್ ಶಿಬಿರದ ಸಮಾರೋಪ ಸಮಾರಂಭದ ವೇಳೆ ತರಬೇತು ದಾರರಾದ ಶ್ರೀಮತಿ ಪ್ರಮೀಳಾ ಮತ್ತು ಅರಸಿನಮಕ್ಕಿ ಶಿವಾನಿ ಸಂಜೀವಿನಿ ಮಹಿಳಾ ಒಕ್ಕೂಟದ ಮುಖ್ಯ ಪುಸ್ತಕ ಬರಹಗಾರರಾದ ಶ್ರೀಮತಿ ನೀತಾ ರಾಧೇಶ್ ಆಚಾರ್ಯ ಮತ್ತು 31 ಮಂದಿ ಶಿಬಿರಾರ್ಥಿಗಳು ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಿಸುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ ರೂ. 5,210/– ಮೊತ್ತವನ್ನು ನೀಡಿ ಸಹಕರಿಸಿದ್ದಾರೆ.


## ಸೇವಾಧಾಮದಲ್ಲಿ ಹುಟ್ಟುಹಬ್ಬ ಆಚರಣೆ




ಕಡಬ ತಾಲೂಕು ಕೌಕ್ರಾಡಿ ಗ್ರಾಮದ ಶ್ರೀಮತಿ ಗಾಯತ್ರಿ. ಎಂ ಅವರ 53ನೇ ಹುಟ್ಟುಹಬ್ಬವನ್ನು, ಸೌತಡ್ಕ, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ಆಗಸ್ಟ್ 23 ರಂದು ಭೇಟಿ ನೀಡಿ. ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಕನ್ಯಾಡಿಯಲ್ಲಿ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರಕ್ಕೆ ರೂ. 10000/– ದೇಣಿಗೆಯನ್ನು ನೀಡಿ ಹುಟ್ಟುಹಬ್ಬವನ್ನು ವಿಶೇಷ ರೀತಿಯಲ್ಲಿ ಆಚರಿಸಿಕೊಂಡಿದ್ದಾರೆ.

ಶ್ರೀಮತಿ ಗಾಯತ್ರಿ ಎಂ ಇವರಿಗೆ ಸಂಸ್ಥೆಯ ಪರವಾಗಿ ಶುಭಹಾರೈಸಲಾಯಿತು. ಈ ಸಂದರ್ಭದಲ್ಲಿ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.


ಶ್ರೀಮತಿ ಮತ್ತು ಶ್ರೀ ಲಕ್ಷ್ಮೀನಾರಾಯಣ ಭಟ್ ಪಾರ್ಪಿಕಲ್ಲು ಅವರ 32ನೇ ವಿವಾಹ ವಾರ್ಷಿಕೋತ್ಸವದ ಪ್ರಯುಕ್ತ ಸೌತಡ್ಕ ಸೇವಾಧಾಮ ಕೇಂದ್ರಕ್ಕೆ ಭೇಟಿ ನೀಡಿ 20 ತೆಂಗಿನಕಾಯಿ ದೇಣಿಗೆಯಾಗಿ ನೀಡಿರುತ್ತಾರೆ.



## ಸೇವಾಧಾಮ ಕಾರ್ಯಚಟುವಟಿಕೆಗಳಿಗೆ ದೇಣಿಗೆ



ಶಿಶಿಲದ ಶ್ರೀ ಉದಯ ರವರು ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ 17 ದಿನಗಳ ಪುನಶ್ಚೇತನವನ್ನು ಪಡೆದು ಕೊಂಡು ಇಂದು ಸೇವಾಧಾಮದಿಂದ ಡಿಸ್ಚಾರ್ಜ್ ಆಗುವ ಸಂದರ್ಭದಲ್ಲಿ ಸೇವಾಧಾಮ ಮಾಡುವ ಕಾರ್ಯಚಟುವಟಿಕೆಗಳಿಗೆ ರೂ. 5000/– ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ. ಇವರ ಮುಂದಿನ ಜೀವನ ಸುಖಕರವಾಗಿರಲಿ ಎಂದು ಶುಭಹಾರೈಸೋಣ.




ಮಂಗಳೂರಿನ ಶ್ರೀ ಶಿರಡಿ ಬಿಕ್ಷಾ ಕೇಂದ್ರದ ತಂಡದವರು ಸೇವಾಧಾಮ ಪುನಶ್ಚೇತನ ಕೇಂದ್ರಕ್ಕೆ ಭೇಟಿ ನೀಡಿ, ಸನಿವಾಸಿಗಳ ಕ್ಷೇಮ ವಿಚಾರಿಸಿ, ಸೇವಾ ಚಟುವಟಿಕೆಗಳಿಗೆ ರೂ. 3000/– ದೇಣಿಗೆಯನ್ನು ನೀಡಿರುತ್ತಾರೆ.



ಉಜಿರೆಯ ಶ್ರೀ ಯುವರಾಜ್ ರವರು ಸೇವಾಧಾಮ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರಕ್ಕೆ ಆಗಸ್ಟ್ 12 ರಂದು ಭೇಟಿ ನೀಡಿ ಸೇವಾಧಾಮ ಮಾಡುವ ಕಾರ್ಯಚಟುವಟಿಕೆಗಳಿಗೆ ರೂ. 2500/– ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ. ಸಿಬ್ಬಂದಿವರ್ಗದವರು ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಧನ್ಯವಾದವಿತ್ತರು.



ತೀರ್ಥಹಳ್ಳಿಯ ಶ್ರೀ ಶ್ರೀಧರ್ ರವರು ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ 107 ದಿನಗಳ ಪುನಶ್ಚೇತನವನ್ನು ಪಡೆದುಕೊಂಡು ಇಂದು ಸೇವಾಧಾಮದಿಂದ ಡಿಸ್ಚಾರ್ಜ್ ಆಗುವ ಸಂದರ್ಭದಲ್ಲಿ ಸೇವಾಧಾಮ ಮಾಡುವ ಕಾರ್ಯಚಟುವಟಿಕೆಗಳಿಗೆ ರೂ. 2000/– ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ. ಇವರ ಮುಂದಿನ ಜೀವನ ಸುಖಕರವಾಗಿರಲಿ ಎಂದು ಶುಭ ಹಾರೈಸೋಣ





ಆಗಸ್ಟ್ 27ರಂದು ನಡೆದ ಗಣೇಶ ಚತುರ್ಥಿಯ ಸಂದರ್ಭದಲ್ಲಿ ಶ್ರೀ ಸಾರ್ವಜನಿಕ ಗಣೇಶೋತ್ಸವ ಸಮಿತಿ ಕಜಕ್ಕೆ ಹಾಗೂ ಶ್ರೀ ವಿದ್ಯಾ ಗಣಪತಿ ಸೇವಾ ಸಮಿತಿ ಮಲವಂತಿಗೆಗೆ ಕನ್ಯಾಡಿ ಸೇವಾಭಾರತಿ ತಂಡದವರು ಭೇಟಿ ನೀಡಿ ಸೇವಾಧಾಮ ಮಾಡುವ ಕಾರ್ಯಚಟುವಟಿಕೆ ಗಳಿಗೆ ದೇಣಿಗೆಯನ್ನು ಸಂಗ್ರಹಿಸಲಾಯಿತು. ಈ ಸಂದರ್ಭದಲ್ಲಿ ಸೇವಾ ಭಾರತಿ ಟ್ರಸ್ಟಿ ಶ್ರೀ ಜಯರಾಜ್ ಸಾಲಿಯನ್ ಕಾನರ್ಪ, ಸ್ವಯಂಸೇವಕರಾದ ಶ್ರೀ ಚಂದನ್ ಗುಡಿಗಾರ್ ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

*Believe you can and you're halfway there*

# ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಪುನಶ್ಚೇತನವನ್ನು ಪಡೆದುಕೊಂಡು ಆಗಸ್ಟ್ ತಿಂಗಳಲ್ಲಿ ಡಿಸ್ಚಾರ್ಜ್ ಆದವರು



ಶ್ರೀ ಶಿವರಾಮ್
ಕಡಬ





ಶ್ರೀ ಶಿವನ್
ಮಡಿಕೇರಿ





ಶ್ರೀ ಉದಯ
ಶಿಶಿಲ






ಶ್ರೀ ಸುಬ್ರಮಣ್ಯ ಗಣೇಶ ಹೆಗ್ಡೆ
ಹೊನ್ನಾವರ





ಆಗಸ್ಟ್ ಸೇವಾಸಂಗಮ ಆನ್‌ಲೈನ್ ಮಾಹಿತಿ ಕಾರ್ಯಾಗಾರ ದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಶ್ರೀ ಸಿಜೋ ವರ್ಗಿಸ್ ರವರು ಬೆನ್ನುಹುರಿ ಅಪಘಾತಕ್ಕೊಳಗಾದವರಿಗೆ ಆತ್ಮವಿಶ್ವಾಸ ಮತ್ತು ಸ್ವತಂತ್ರ ಜೀವನಕ್ಕಾಗಿ ಗಾಲಿಕುರ್ಚಿ ಕೌಶಲ್ಯದ ಬಗ್ಗೆ ಮಾಹಿತಿ ನೀಡಿದರು. ಕಾರ್ಯಾಗಾರದಲ್ಲಿ ಒಟ್ಟು 46 ಮಂದಿ ಭಾಗವಹಿಸಿದ್ದರು.



ಮಂಡ್ಯದ ಶ್ರೀ ವಿ.ಕೆ ಮಧು ಎರೆಹಳ್ಳಿ ಯವರು ಬೆನ್ನುಹುರಿ ಅಪಘಾತಕ್ಕೊಳಗಾಗಿ ಮಲಗಿದ ಪರಿಸ್ಥಿತಿಯಲ್ಲಿದ್ದು ಸೇವಾಭಾರತಿ ಕನ್ಯಾಡಿಯ ಕೋರಿಕೆಯಂತೆ ಭಾರತೀಯ ಮಜ್ದೂರ್ ಸಂಘದ ರಾಜ್ಯ ಉಪಾಧ್ಯಕ್ಷರಾದ ಶ್ರೀ ವಾಸುದೇವ್.ಎಸ್.ಎನ್ ರವರು ಮಧುರವರಿಗೆ ಗಾಳಿಯ ಹಾಸಿಗೆಯನ್ನು ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ NOIP BMS ಸದಸ್ಯರಾದ ಶ್ರೀ ಎಂ. ರಾಚಯ್ಯ, ವಾಲ್ಮೀಕಿ ಬ್ರಿಗೇಡ್ ಅಧ್ಯಕ್ಷರಾದ ಶ್ರೀ ಶಂಕರ ಉಪಸ್ಥಿತರಿದ್ದರು.

# ತಮ್ಮ ವಿಶೇಷ ದಿನವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿ ಮಾದರಿಯಾದವರು



ಸೇವಾಧಾಮದಲ್ಲಿ ಪುನಶ್ಚೇತನ ಪಡೆಯುತ್ತಿರುವ ದಿವ್ಯಾಂಗರಿಗೆ ದೇಣಿಗೆಯನ್ನು
ನೀಡುವ ಮೂಲಕ ತಮ್ಮ ವಿಶೇಷ ದಿನವನ್ನು ಆಚರಿಸಿ ಎಲ್ಲರಿಗೂ ಮಾದರಿಯಾಗಿದ್ದೀರಿ.
ತಮ್ಮ ಈ ಸೇವಾಕಾರ್ಯಕ್ಕೆ ಕೃತಜ್ಞತೆಗಳು...





ಶ್ರೀಮತಿ ತೇಜಾವತಿ
ಕನ್ಯಾಡಿ



ಶ್ರೀಮತಿ ಸ್ವರ್ಣಗೌರಿ
ಧರ್ಮಸ್ಥಳ



ಶ್ರೀ ಸೂರಜ್ ಎಸ್ ಕುಲಾಲ್
ಮಂಗಳೂರು




ಶ್ರೀ ವೆಂಕಟಗಿರಿ
ಬೆಂಗಳೂರು



ಶ್ರೀ ಶರತ್ ಕೃಷ್ಣ ಪಡುವೆಟ್ನಾಯ
ಉಜಿರೆ



ಶ್ರೀ ಸಚಿನ್ ಗೌಡ
ಕಲ್ಮಂಜ




ಶ್ರೀ ಭೂಷಣ್
ಮಂಗಳೂರು



ಶ್ರೀ ರೋಶನ್
ಬೆಳ್ಮಣ್



ಶ್ರೀ ಚೈತ್ರೇಶ್
ಇಳಂತಿಲ



ಶ್ರೀ ಸರ್ವೋತ್ತಮ್ ಎಸ್.ಅಮೀನ್
ಉಡುಪಿ



ಬೇಬಿ ಪವನಿಕ ಬಿ.ಕೆ.
ಕನ್ಯಾಡಿ–II



ಬೇಬಿ ಸ್ತುತಿ ಸಾಲ್ಯಾನ್
ನಿಡಿಗಲ್



ಬೇಬಿ ವಿಹಾನ ಎಂ.ಎಂ.
ನಿಡ್ಲೆ



ಶ್ರೀಮತಿ ಎಂ ಗಾಯತ್ರಿ
ಕೌಕ್ರಾಡಿ



ಶ್ರೀ ಜನಾರ್ಧನ್
ಹಿಪ್ಪ



ಶ್ರೀಮತಿ ರಾಜಶ್ರೀ ಹೆಗ್ಡೆ
ಕಣಿಯೂರು ಗುತ್ತು



ಶ್ರೀ ಮಧ್ವರಾಜ್ ಎಂ.ಜೆ.
ಧರ್ಮಸ್ಥಳ



ಕ್ಯಾಪ್ಟನ್ ಬ್ರಿಜೇಶ್ ಚೌಟ
ಮಂಗಳೂರು

## ನಿಮಗಿದು ತಿಳಿದಿರಲಿ

# ಬೆನ್ನುಹುರಿಯ ಗಾಯದ ನಂತರ ಕರುಳಿನ ನಿರ್ವಹಣೆ (SCI) ಹೇಗೆ?

ಸ್ಥಿರವಾದ ಕರುಳಿನ ಚಲನೆಯನ್ನು ಸಾಧಿಸಲು, ಅಪಘಾತಗಳನ್ನು ತಡೆಗಟ್ಟಲು ಮತ್ತು ಜೀವನದ ಗುಣಮಟ್ಟವನ್ನು ಕಾಪಾಡಿಕೊಳ್ಳಲು ನಿಯಮಿತ ದಿನಚರಿಯನ್ನು ರಚಿಸುವುದನ್ನು ಒಳಗೊಂಡಿರುತ್ತದೆ. ಯಶಸ್ವಿ ಕಾರ್ಯಕ್ರಮದ ಪ್ರಮುಖ ಅಂಶಗಳಲ್ಲಿ ಹೆಚ್ಚಿನ ಫೈಬರ್ ಆಹಾರ, ಸಾಕಷ್ಟು ದ್ರವ ಸೇವನೆ, ನಿಗದಿತ ವ್ಯಾಯಾಮ ಮತ್ತು ಡಿಜಿಟಲ್ ರೆಕ್ಟಲ್ ಸ್ಟಿಮ್ಯುಲೇಶನ್, ಸಪೊಸಿಟರಿಗಳು ಮತ್ತು ಟ್ರಾನ್ಸಾನಲ್ ನೀರಾವರಿಯಂತಹ ಕರುಳಿನ ಉದ್ದೀಪನ ತಂತ್ರಗಳು ಸೇರಿವೆ.

**ಆಹಾರ ಮತ್ತು ಜೀವನಶೈಲಿ ಹೊಂದಾಣಿಕೆಗಳು**

ಹೈ–ಫೈಬರ್ ಆಹಾರ: ಮಲಕ್ಕೆ ಬೃಹತ್ ಪ್ರಮಾಣದಲ್ಲಿ ಸೇರಿಸಲು ಮತ್ತು ನಿಯಮಿತ ಕರುಳಿನ ಚಲನೆಯನ್ನು ಉತ್ತೇಜಿಸಲು ಸಾಕಷ್ಟು ಹಣ್ಣುಗಳು, ತರಕಾರಿಗಳು ಮತ್ತು ಇತರ ಹೆಚ್ಚಿನ ಫೈಬರ್ ಆಹಾರಗಳನ್ನು ಸೇವಿಸಿ.

## ನಮ್ಮ ಯೋಜನೆಗಳು

**ಆರೋಗ್ಯಮ್ :** ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆ್ಯಂಬುಲೆನ್ಸ್ ಸೇವೆಗಳು.

**ಸಬಲಿನಿ :** ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ.

**ಸೇವಾಧಾಮ :** ಬೆನ್ನುಹುರಿ ಅಪಘಾತಗೊಂಡವರಿಗಾಗಿ ಪುನಶ್ಚೇತನ ಕೇಂದ್ರ.

**ಸೇವಾಪಥ :** ಮಾಸಿಕ ಈ–ನ್ಯೂಸ್ ಲೆಟರ್ .

**ಸೇವಾ ಸಂಗಮ :** ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆನ್‌ಲೈನ್ ಮೂಲಕ ಸಂಬಂಧಿತ ತಜ್ಞರಿಂದ ಮಾಹಿತಿ, ತರಬೇತಿ ಹಾಗೂ ಮಾರ್ಗದರ್ಶನ.

**ಆರೋಗ್ಯ ಬಿಂದು:** ಫಲಾನುಭವಿಗಳಿಗೆ ಕನಿಷ್ಠ ದರದಲ್ಲಿ ಸೆಲ್ಫ್‌ಕೇರ್ & ಮೆಡಿಕಲ್ ಕಿಟ್‌ಗಳು

### ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

| | |
|---|---|
| ರೂ. 2000/– | ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್‌ಗಳಿಗಾಗಿ ಸಹಕಾರ. |
| ರೂ. 3000/– | ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ಹೊತ್ತಿನ ಊಟೋಪಚಾರಕ್ಕೆ ಸಹಕಾರ |
| ರೂ. 4500/– | ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ |
| ರೂ. 6000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ |
| ರೂ. 10000/– | ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ |
| ರೂ. 10000/– | ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು |
| ರೂ. 15000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ |

### DONATE & JOIN US IN OUR MISSION

| | |
|---|---|
| A/c Holder | - M/s. Sevabharathi(R) |
| A/c No | - 01682200072637 |
| IFS Code | - CNRB0010168 |
| Bank | - Canara Bank, Kokkada Branch |

### Support us for constructions of Rehabilitation Centre

| | |
|---|---|
| A/c Holder | - M/s. Sevabharathi(R) |
| A/C NUMBER | - 120000400920 |
| IFSC CODE | - CNRB0010246 |
| BANK TYPE | - CURRENT ACCOUNT |

*We are put in situations to build our character... not destroy us*

# "I choose to be unstoppable" ಆತ್ಮಸ್ಥೈರ್ಯದಿಂದ ದಿವ್ಯಾಂಗತೆಯನ್ನು ಮೆಟ್ಟಿನಿಂತ ನಿರಂಜನ್ ನೇರ್ಲಿಗೆ ವಿ. ರವರ ಯಶೋಗಾಥೆ

ನಿರಂಜನ್ ನೇರ್ಲಿಗೆ ವಿ ಯವರು ಮೂಲತಃ ದಾವಣಗೆರೆಯವರು. ಪ್ರಸ್ತುತ ಇದೀಗ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಗೃಹಿಣಿಯಾಗಿದ್ದ ತಾಯಿ ಶ್ರೀಮತಿ ಹಂಪಮ್ಮ, ತಂದೆ ದಿ. ಎಂ.ಎನ್.ವೀರಬಸವಯ್ಯ ದಾವಣಗೆರೆ ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದವರು. ಹತ್ತು ಜನ ಮಕ್ಕಳಲ್ಲಿ ಇವರೇ ಕಿರಿಯವರು. ನಿರಂಜನ್ ರವರು ಪ್ರೌಢಶಾಲೆಯಲ್ಲಿ ಓದುತ್ತಿದ್ದಾಗಲೇ ತಂದೆಯನ್ನು ಕಳೆದುಕೊಂಡರು. ಸಣ್ಣ ವಯಸ್ಸಿನಲ್ಲೇ ಅನೇಕ ಕಷ್ಟವನ್ನು ಎದುರಿಸಿದ ಇವರು, ಪ್ರೌಢಶಾಲೆಯನ್ನು ದಾವಣಗೆರೆಯಲ್ಲಿ ಪೂರ್ಣಗೊಳಿಸಿ, ಪಿಯುಸಿ ವ್ಯಾಸಂಗವನ್ನು ಬೆಂಗಳೂರಿನಲ್ಲಿ ಮಾಡಿದರು. ದಾವಣಗೆರೆಯ ಬಾಪೂಜಿ ತಾಂತ್ರಿಕ ಕಾಲೇಜಿನಲ್ಲಿ ನಿರಂಜನ್ ಸಿವಿಲ್ ಇಂಜಿನಿಯರಿಂಗ್ ಪದವಿಗೆ ಸೇರಿಕೊಂಡಿದ್ದರು. ಅವರೆಗೂ ಓದಿನ ಬಗ್ಗೆ ಅಷ್ಟೇನು ಗಂಭೀರವಾಗಿರದ ನಿರಂಜನ್ ರವರು ಸ್ವಾಮಿ ವಿವೇಕಾನಂದರ ವಿಚಾರಧಾರೆಯಿಂದ ಪ್ರಭಾವಿತರಾಗಿ ಜೀವನದಲ್ಲಿ ಗುರಿಯನ್ನು ನಿಶ್ಚಯಿಸಿಕೊಂಡರು. ಇಂಜಿನಿಯರಿಂಗ್‌ನಲ್ಲಿ ಎರಡನೇ ರ‍್ಯಾಂಕ್ ಪಡೆದಿದ್ದು ಇವರ ಕನಸುಗಳಿಗೆ ಹೊಸ ರೆಕ್ಕೆ ಮೂಡಲು ಕಾರಣವಾಯಿತು. ಮುಂದೆ, ಬಾಂಬೆ ಐಐಟಿಯಿಂದ ಅಂತರಿಕ್ಷ ವಿಜ್ಞಾನಕ್ಕೆ ಸಂಬಂಧಿಸಿ ಸ್ನಾತಕೋತ್ತರ ಪದವಿ ಪಡೆದರು. ಮುಂಬೈನಲ್ಲೇ ಒಳ್ಳೆಯ ಕೆಲಸವನ್ನು ಹುಡುಕಿ ಮಾಡುತಿದ್ದರು. ಆದರೆ, ವಿದೇಶದಲ್ಲಿ ಉದ್ಯೋಗ ಮಾಡಬೇಕೆಂಬ ಆಸೆ ಇವರದಾಗಿತ್ತು. ಆದರೆ ವಿಧಿಯ ಆಟ ಬೇರೇನೇ ಇತ್ತು ಅಮೆರಿಕಕ್ಕೆ ಹೋಗಲು ಸಿದ್ಧತೆ ನಡೆಸುತ್ತಿದ್ದಾಗಲೇ ಸಂಭವಿಸಿದ ಅವಘಡ ಬದುಕಿನ ದಿಕ್ಕನ್ನು ಬದಲಿಸಿತು. ಹಾಗಾದರೆ ಅವರ ಬದುಕಿನಲ್ಲಿ ನಡೆದ ಘಟನೆ ಆದರೂ ಏನು?

ಅಂದು 13 ನವೆಂಬರ್ 1994 ರಲ್ಲಿ ದೈನಂದಿನ ಕೆಲಸವನ್ನು ಮುಗಿಸಿ ಮನೆಗೆ ವಾಪಾಸಾಗುವ ವೇಳೆ, ಅವರಿಗೆ ವಿಪರೀತ ಜ್ವರ. ತೀವ್ರ ಜ್ವರದಲ್ಲೇ ಮನೆಯ ಮೊಗಸಾಲೆಗೆ ಬಂದ ಇವರಿಗೆ ಏನಾಯಿತೋ ಗೊತ್ತಿಲ್ಲ ಕೆಲವೇ ಕ್ಷಣಗಳಲ್ಲಿ ಅಪಾರ್ಟ್‌ಮೆಂಟ್ ಬಾಲ್ಕನಿಯ ನಾಲ್ಕನೆಯ ಮಹಡಿಯಿಂದ ಕೆಳಗೆ ಬಿದ್ದಿದ್ದರು. ಅಲ್ಲಿದ್ದವರೆಲ್ಲರು ತಕ್ಷಣ ಇವರನ್ನು ಪ್ರಾಥಮಿಕ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಿದರೂ, ಪರೀಕ್ಷೆ ಮಾಡಿದ ವೈದ್ಯರು ಇದನ್ನು ಡೆಲಿರಿಯಮ್ ಎಂದು ಕರೆಯುತ್ತಾರೆ ಈ ಪರಿಸ್ಥಿತಿಯಲ್ಲಿರುವ ವ್ಯಕ್ತಿ ಅರೆಪ್ರಜ್ಞಾವಸ್ಥೆಯಲ್ಲಿದ್ದು, ಆತನಿಗೆ ತನ್ನ ಸುತ್ತಲಿನಲ್ಲಿ ಏನಾಗುತ್ತಿದೆ ಎಂಬುದರ ಬಗ್ಗೆ ಸ್ವಲ್ಪನೂ ಅರಿವು ಇರುವುದಿಲ್ಲ. ವಿಪರೀತ ಜ್ವರದಿಂದ ನರಳುತ್ತಿರುವ ವ್ಯಕ್ತಿ ತನಗೇ ಅರಿವಿಲ್ಲದೆ ಇಂತಹ ಅಪಘಾತಗಳಿಗೆ ಒಳಗಾಗುವ ಸಾಧ್ಯತೆಗಳಿರುತ್ತವೆ ಎಂದರು. ಹಾಗೇ ಬೆನ್ನುಹುರಿ ಅಪಘಾತಕ್ಕೊಳಗಾಗಿ ಸೊಂಟದ ಕೆಳಭಾಗ ಸ್ವಾಧೀನ ಕಳೆದುಕೊಂಡು ಸಂಪೂರ್ಣವಾಗಿ ಹಾಸಿಗೆ ಹಿಡಿಯುವ ಪರಿಸ್ಥಿತಿಯೂ ಎದುರಾಯಿತು. ಪ್ರತಿ ದಿನ ಆಸ್ಪತ್ರೆವಾಸ ಮಾಡಿ–ಮಾಡಿ ಬೇಸತ್ತು ಹೋಗಿದ್ದರು. ಆದರೂ ಬದುಕಿನಲ್ಲಿ ಭರವಸೆಯನ್ನು ಕೈ ಬಿಟ್ಟರಲಿಲ್ಲ. ಕೊನೆಗೊಂದು ದಿನ ವೈದ್ಯರ ಮಾತು ಇವರ ಕನಸನ್ನೇ ನುಚ್ಚುನೂರಾಗಿಸಿತು. ನೀವು ಇನ್ಮುಂದೆ ನಡೆದಾಡಲು ಸಾಧ್ಯವಿಲ್ಲ ಗಾಲಿಕುರ್ಚಿಯ ಮುಖಾಂತರ ಮಾತ್ರ ಚಲಿಸಲು ಸಾಧ್ಯವೆಂದು ವೈದ್ಯರು ಮನವರಿಕೆ ಮಾಡಿದರು. ಅನೇಕ ಆಸೆ ಆಕಾಂಕ್ಷೆಯನ್ನು ಇಟ್ಟುಕೊಂಡಿದ್ದ ನಿರಂಜನ್ ರವರ ಕನಸು ಒಂದೇ ಸಮಯಕ್ಕೆ ನೆಲಕ್ಕೆ ಬಡಿದಂತಾಯಿತು. ಅಮೇರಿಕಾದಲ್ಲಿ ಕೆಲಸ ಮಾಡುವ ಆಸೆ ಇದ್ದ ಇವರಿಗೆ ಒಂದು ಹೆಜ್ಜೆಯನ್ನು ಇಡಲು ಸಾಧ್ಯವಾಗದ ಪರಿಸ್ಥಿತಿ ಎದುರಾಯಿತು. ಮುಂದೇನು ಮಾಡುವುದು? ನನ್ನಿಂದ ಏನು ಮಾಡಲು ಸಾಧ್ಯವಿದೆ? ಎನ್ನುವ ಹಲವಾರು ಪ್ರಶ್ನೆಗಳು ಇವರನ್ನು ಕೆಣಕಲು ಪ್ರಾರಂಭಿಸಿತು. ಆದರೆ, ಈ ಸ್ಥಿತಿಯಿಂದ ಹೊರಬರಲೇಬೇಕು, ಹೊಸದಾಗಿ ಬದುಕು ಕಟ್ಟಿಕೊಳ್ಳಲೇಬೇಕು ಎಂದು ನಿಶ್ಚಯಿಸಿ, 'ಐ ಚೂಸ್ ಟು ಬಿ ಅನ್‌ಸ್ಟಾಪೆಬಲ್' ಅಂತ ಹೇಳಿಕೊಂಡವರು ನಿರಂಜನ್ ನೇರ್ಲಿಗೆಯವರು.

ಬದುಕಿನಲ್ಲಿ ಒಂದು ದಾರಿ ಮುಚ್ಚಿ ಹೋದರೆ ಹೊಸ ದಾರಿಗಳು ತೆರೆದುಕೊಳ್ಳುತ್ತದೆ ಎಂಬುದಕ್ಕೆ ಇವರ ಜೀವನದಲ್ಲಿ ನಡೆದ ಘಟನೆಯೇ ಸಾಕ್ಷಿ. ತನ್ನ ಛಲವನ್ನು ಬಿಡದೆ ನಾನು ಏನನ್ನಾದರೂ ಸಾಧಿಸಬಲ್ಲೆ ಎಂಬ ಹಠ ತೊಟ್ಟು ಹಾಸಿಗೆಯಿಂದ ಎದ್ದು ವೀಲ್ ಚೇರ್ ಮುಖಾಂತರವೇ ತನ್ನ ಜೀವನವನ್ನು ರೂಪಿಸಿಕೊಂಡರು.



ವಿವಿಧ ಕಾರ್ಪೊರೇಟ್ ಕಂಪನಿಗಳಲ್ಲಿ 12 ವರ್ಷಗಳ ಕಾಲ ಕಾರ್ಯನಿರ್ವಹಿಸಿದ ಬಳಿಕ ಸ್ವ – ಉದ್ಯೋಗ ಆರಂಭಿಸಿದ ನಿರಂಜನ್ ರವರು ಕೌಶಲ ತರಬೇತುದಾರರಾಗಿ, ಸ್ಫೂರ್ತಿದಾಯಕ ಮಾತುಗಾರರಾಗಿ ಮತ್ತು ಲೇಖಕರಾಗಿ ಗಮನ ಸೆಳೆದಂತಹ ವ್ಯಕ್ತಿ. ಅಮೆರಿಕ ಸೇರಿದಂತೆ 5 ದೇಶಗಳಿಗೆ ಪ್ರಯಾಣಿಸಿ ಸಾವಿರಾರು ಜನರಿಗೆ ವೃತ್ತಿ ಕೌಶಲ ತರಬೇತಿ ಮತ್ತು ಮಾಹಿತಿ–ತಂತ್ರಜ್ಞಾನ ಕಂಪನಿಗಳ ಮತ್ತು ಬಹುರಾಷ್ಟ್ರೀಯ ಕಂಪನಿಗಳ ಉದ್ಯೋಗಿಗಳಿಗೆ ಕೌಶಲ ತರಬೇತಿ ನೀಡಿದ ಹೆಗ್ಗಳಿಕೆ ಇವರದಾಗಿದೆ. ಯಾವ ವಿಷಯದಲ್ಲೂ ಹಿಂದುಳಿಯದೆ ಇವರ ಅವಿರತ ಶ್ರಮದಿಂದ ಮುನ್ನುಗ್ಗಿ ಎಕ್ಸೆಲ್ ಪ್ಲಸ್ ಸರ್ವಿಸ್ ಕನ್ಸಲ್ಟೇಷನ್ ಎಂಬ ತಮ್ಮದೇ ಕಂಪನಿಯನ್ನು ಸ್ಥಾಪಿಸಿದರು.

ಎಲ್ಲರಿಗೂ ಮಾದರಿಯಾಗುವಂತೆ ಜೀವನವನ್ನು ಕಟ್ಟಿಕೊಂಡ ನಿರಂಜನ್ ರವರು ಯಾವುದೇ ಸಮಯದಲ್ಲೂ ಧೈರ್ಯಗೆಡವಿಕೊಳ್ಳದೆ ಬಂದಂತಹ ಕಷ್ಟಗಳನ್ನ ಮೆಟ್ಟಿನಿಂತು. ತಾನು ಏನನ್ನು ಸಾಧಿಸ ಬಲ್ಲೆ ನನ್ನಿಂದ ಯಾವುದು ಸಾಧ್ಯವಿಲ್ಲ ಎನ್ನುವ ಮಾತು ಸುಳ್ಳು ಎಂಬ ಆತ್ಮವಿಶ್ವಾಸವನ್ನು ಇಟ್ಟುಕೊಂಡರು. ಇವರನ್ನು ನೋಡಿಕೊಳ್ಳುತ್ತಿದ್ದ ನರ್ಸ್ ಇವರ ಬಾಳಸಂಗಾತಿಯಾಗಿ ಕೈ ಹಿಡಿದರು. ಒಂಬತ್ತು ತಿಂಗಳ ಮಗು (ಪ್ರಣವ್)ವನ್ನು ದತ್ತು ಪಡೆದರು. ಆದರೆ, ಪ್ರಣವ್‌ಗೆ ನಾಲ್ಕು ವರ್ಷವಾಗಿದ್ದಾಗ, ನಿರಂಜನ್ ಜತೆಗಿನ ಸಂಬಂಧವನ್ನು ನರ್ಸ್ ಕೊನೆಗೊಳಿಸಿದರು. ಆಗ ಮಗನನ್ನೂ ಸಂಭಾಳಿಸುತ್ತ, ತಮ್ಮ ಬದುಕನ್ನೂ ರೂಪಿಸಿಕೊಳ್ಳುತ್ತ ಮುನ್ನಡೆದ ನಿರಂಜನರಿಗೆ ಈಗ ಮಗ ಪ್ರಣವ್ ಎಲ್ಲಾ ರೀತಿಯಲ್ಲೂ ಬೆನ್ನೆಲುಬಾಗಿ ನಿಂತಿದ್ದಾನೆ ಎಂದರು ತಪ್ಪಾಗಲಾರದು. ಜೀವನದಲ್ಲಿ ಅನೇಕ ಮುಜುಗರ, ಅಸಹಾಯಕತೆ, ಕಷ್ಟಗಳನ್ನು, ನೋವು ನಿಂದನೆಗಳನ್ನು, ಸಂಭಾಳಿಸಿಕೊಂಡು ಬಂದಂತಹ ನಿರಂಜನ್ ರವರ ಸಾಧನೆ ಅಪಾರವಾದದ್ದು.. ಇವರು ಮಾಡಿದಂತಹ ಸಾಧನೆಯನ್ನು ಗುರುತಿಸಿ ರೋಟರಿ ಡೈವರ್ಸಿಟಿ ಅವಾರ್ಡ್ ಸೇರಿದಂತೆ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿರುತ್ತಾರೆ. ತಮ್ಮ ಬದುಕಿನ ಪಯಣವನ್ನು, ಅವರು ನಡೆದು ಬಂದ ಹಾದಿಯನ್ನು, ಪಟ್ಟ ಕಷ್ಟವನ್ನು "ಐ ಚೂಸ್ ಟು ಬಿ ಅನ್‌ಸ್ಟಾಪೆಬಲ್" ಎಂಬ 220 ಪುಟಗಳ ಪುಸ್ತಕಗಳಲ್ಲಿ ದಾಖಲಿಸಿದ್ದಾರೆ. ಕನ್ಯಾಡಿ ಸೇವಾಭಾರತಿ ಸಂಸ್ಥೆಯು ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಡೆಸುವಂತಹ ಶಿಬಿರದಲ್ಲಿ ಪ್ರತಿ ಹಂತದಲ್ಲೂ ನಮ್ಮ ಜೊತೆ ಕೈ ಜೋಡಿಸಿ ಬೆನ್ನೆಲುಬಾಗಿ ನಿಂತಿದ್ದು ಸಹ ಇದೆ.. ಇವರ ಈ ಪ್ರೋತ್ಸಾಹಕ್ಕೆ ನಾವೆಂದಿಗೂ ಚಿರಋಣಿ.. ನಿರಂಜನ್ ರವರು ಬದುಕಿನ ಪ್ರತಿ ಹಂತದಲ್ಲಿ ದಾಟಿ ಬಂದ ಸವಾಲುಗಳನ್ನು ನೆನೆಸಿಕೊಂಡರೆ ಅಚ್ಚರಿ ಮತ್ತು ಹೆಮ್ಮೆ ಎನಿಸುತ್ತದೆ.